# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:03 • ಸಂಚಿಕೆ: 04 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 25.06.2025 • ಬುಧವಾರ • ಪುಟ:04 • ಬೆಲೆ:2
Volume:03 • Issue: 04 • PRGI No:KARKAN/2023/88055 • VIJAYANAGARA • 25.06.2025 • Wednesday • Page:04 • Rs:2




Grow with Us, Advertise in Hampi Times
Print & Digital Media
"Looking to bring your sales and services to readers Fingertips? HAMPI TIMES is the ideal platform"



Call:9448633038/email:hampitimes@gmail.com


## ಆನಂದ ಬಾಣ






ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಮಂಗಳವಾರ ಭೇಟಿಯಾಗಿ 15 ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯಯವನ್ನು 16ನೇ ಹಣಕಾಸು ಆಯೋಗದಲ್ಲಿ ಸರಿದೂಗಿಸುವ ಜೊತೆಗೆ ರಾಜ್ಯದ ಪಾಲನ್ನು ಒದಗಿಸುವುದೂ ಸೇರಿದಂತೆ ಹಲವು ಸಂಗತಿಗಳ ಕುರಿತು ಚರ್ಚಿಸಿ ರಾಜ್ಯದ ಪರವಾಗಿ ಮನವಿ ಸಲ್ಲಿಸಿದರು.

# ಎಚ್ಚೆತ್ತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸುಗಮ ಸಂಚಾರಕ್ಕೆ ತಾತ್ಕಾಲಿಕ ಪರಿಹಾರ

### ರಸ್ತೆಯಲ್ಲಿದ್ದ ನೀರನ್ನು ರಾಜಕಾಲುವೆಗೆ ಸಂಪರ್ಕ | ಶಾಶ್ವತ ಪರಿಹಾರಕ್ಕೆ ಸಾರ್ವಜನಿಕರ ಒತ್ತಾಯ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಮಕ್ಕಳ ಜೀವಕ್ಕೆ ಕಂಠಕ ಕೆರೆಯಂತಾದ ಸರ್ವೀಸ್ ರಸ್ತೆ ಶೀರ್ಷಿಕೆಯಡಿ ಹಂಪಿ ಟೈಮ್ಸ್ ಸೋಮವಾರ ವರದಿ ಪ್ರಕಟಿಸಿದ ಬೆನ್ನಲ್ಲೆ ರಾಷ್ಟ್ರೀಯ ಹೆದ್ದಾರಿ 50ರ ಅಧಿಕಾರಿಗಳು ತಾಲೂಕಿನ ಕಾನಹೊಸಹಳ್ಳಿಯ ಬಳಿ ಮಳೆ ನೀರು ತುಂಬಿ ಸಾರ್ವಜನಿಕರ ಸಂಚಾರಕ್ಕೆ ತೀವ್ರ ಅಡ್ಡಿಯಾಗಿದ್ದ ಸರ್ವೀಸ್ ರಸ್ತೆಗೆ ಮಂಗಳವಾರ ಭೇಟಿ ನೀಡಿ ಪರಿಶೀಲಿಸಿದರು. ಸರ್ವೀಸ್ ರಸ್ತೆಯಲ್ಲಿದ್ದ ನೀರನ್ನು ತಾತ್ಕಾಲಿಕವಾಗಿ ರಾಜಕಾಲುವೆಗೆ ಸಂಪರ್ಕ ಕಲ್ಪಿಸಿ ಹರಿಯುವಂತೆ ಮಾಡಿದರು. ಇದರಿಂದ ಸಾರ್ವಜನಿಕರಿಗೆ ಸ್ವಲ್ಪಮಟ್ಟಿಗೆ ನಿರಾಳತೆ ದೊರೆತಿದೆ.

ಹಲವು ಬಾರಿ ಸರ್ವೀಸ್ ರಸ್ತೆಯಲ್ಲಿ ಮಳೆ ನೀರು ನಿಂತು ಮಕ್ಕಳು ಮತ್ತು ವಾಹನ ಸವಾರರಿಗೆ ತೀವ್ರ ತೊಂದರೆಯಾಗಿತ್ತು. ವಿಶೇಷವಾಗಿ ಶಾಲಾ ಮಕ್ಕಳು ರಸ್ತೆ ದಾಟಲು ಹರಸಾಹಸ ಪಡುತ್ತಿದ್ದರು. ಭಾನುವಾರ ಮರುಕಳಿಸಿದ್ದರಿಂದ ಕೆಸರು ಮತ್ತು ಕೊಳಚೆ ನೀರಿನಿಂದಾಗಿ ರಸ್ತೆ ಸಂಪೂರ್ಣವಾಗಿ ಸಂಚಾರಕ್ಕೆ ಅಯೋಗ್ಯವಾಗಿತ್ತು. ಈ ಕುರಿತು 'ಹಂಪಿ ಟೈಮ್ಸ್' ವರದಿ ಪ್ರಕಟಿಸಿ, ಅಧಿಕಾರಿಗಳ ಗಮನ ಸೆಳೆದಿತ್ತು.

**ಶಾಶ್ವತ ಪರಿಹಾರಕ್ಕೆ ಸಾರ್ವಜನಿಕರ ಒತ್ತಾಯ**

ತಾತ್ಕಾಲಿಕ ಪರಿಹಾರದಿಂದ ಸದ್ಯಕ್ಕೆ ಸಮಸ್ಯೆ ಬಗೆಹರಿದಿದ್ದರೂ, ಇದು ಕೇವಲ ಮೇಲ್ಮೈ ಪರಿಹಾರ ಎಂದು ಸಾರ್ವಜನಿಕರು ಅಭಿಪ್ರಾಯ ಪಟ್ಟಿದ್ದಾರೆ. ಭವಿಷ್ಯದಲ್ಲಿ ಮತ್ತೆ ಮಳೆ ಬಂದಾಗ ಇದೇ ಸಮಸ್ಯೆ ಮರುಕಳಿಸುವ ಸಾಧ್ಯತೆಯಿದೆ. ಹಾಗಾಗಿ, ಸರ್ವೀಸ್ ರಸ್ತೆಯನ್ನು ವೈಜ್ಞಾನಿಕವಾಗಿ ನಿರ್ಮಿಸಿ, ಸಮರ್ಪಕ ಒಳಚರಂಡಿ ವ್ಯವಸ್ಥೆಯನ್ನು ಅಳವಡಿಸುವ ಮೂಲಕ ಶಾಶ್ವತ ಪರಿಹಾರ ಒದಗಿಸುವಂತೆ ಸ್ಥಳೀಯರು ಮತ್ತು ಸಾರ್ವಜನಿಕರು ಒತ್ತಾಯಿಸಿದ್ದಾರೆ.

"ಪ್ರತಿ ಮಳೆಗಾಲದಲ್ಲೂ ಇದೇ ಸಮಸ್ಯೆ ಎದುರಾಗುತ್ತಿದೆ. ಅಧಿಕಾರಿಗಳು ಶಾಶ್ವತವಾಗಿ ಈ ಸಮಸ್ಯೆಯನ್ನು ಬಗೆಹರಿಸಬೇಕು. ಕೇವಲ ತಾತ್ಕಾಲಿಕ ಸರಿಪಡಿಸುವಿಕೆಗಳಿಂದ ಯಾವುದೇ ಪ್ರಯೋಜನವಿಲ್ಲ ಎಂದು ಸ್ಥಳೀಯರೊಬ್ಬರು ಅಳಲು ತೋಡಿಕೊಂಡರು. ಸಾರ್ವಜನಿಕರ ಬೇಡಿಕೆಗೆ ಹೆದ್ದಾರಿ ಪ್ರಾಧಿಕಾರ ಹೇಗೆ ಸ್ಪಂದಿಸುತ್ತದೆ ಎಂಬುದನ್ನು ಕಾದು ನೋಡಬೇಕಿದೆ.




# ಯುಪಿಎಸ್ಸಿ, ಐಎಎಸ್ ಸ್ಪರ್ಧಾತ್ಮಕ ತರಬೇತಿಗಾಗಿ ಆನ್‌ಲೈನ್ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

2025–26ನೇ ಸಾಲಿನ ಯುಪಿಎಸ್‌ಸಿ, ಐಎಎಸ್ (UPSC, IAS) ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಸತಿ ಸಹಿತ ತರಬೇತಿ ಪಡೆಯಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಗುಡ್ಡಪ್ಪ ಜಿಗಳಿಕೊಪ್ಪ ತಿಳಿಸಿದ್ದಾರೆ.

ಆಸಕ್ತ ಅರ್ಹ ಅಭ್ಯರ್ಥಿಗಳು ಅರ್ಜಿಗಳನ್ನು ಆನ್‌ಲೈನ್ ಮೂಲಕ https://sevasindhu.karnataka.gov.in/sevasindhu/departmentservices ವೆಬ್ ಸೈಟ್ ಮೂಲಕ ಸಲ್ಲಿಸಬಹುದಾಗಿದೆ. ಅರ್ಜಿಗಳನ್ನು ಸಲ್ಲಿಸಲು ಕೊನೆಯ ಜೂ.30 ಕೊನೆಯ ದಿನವಾಗಿದೆ. ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ) ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸಬಹುದು. ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯ ರೂ.8.00 ಲಕ್ಷ ಮೀರಿರಬಾರದು. ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಕನಿಷ್ಠ 21 ರಿಂದ 35 ವರ್ಷಗಳ ವಯೋಮಿತಿ ಮೀರಿರಬಾರದು. ಹೆಚ್ಚಿನ ಮಾಹಿತಿಗಾಗಿ http://dom.karnataka.gov.in ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಿಗೆ ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದ್ದಾರೆ.



ಹೊಸಪೇಟೆಯಲ್ಲಿ ಮಣ್ಣೆತ್ತಿನ ಅಮವಾಸ್ಯೆ ನಿಮಿತ್ತ ರೈತಕುಟುಂಬದ ಸದಸ್ಯರು ಮಂಗಳವಾರ ಮಣ್ಣಿನ ಜೋಡೆತ್ತುಗಳನ್ನು ಖರೀದಿಸಿದ ಕ್ಷಣ...

# ರಕ್ತದಾನ ಅನೇಕರ ಜೀವಕ್ಕೆ ಸಂಜೀವಿನಿ

### ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿಕೆ | ರಕ್ತದಾನ ಮಾಡಿದ ಡಿಸಿ, ಎಸ್ಪಿ



■ **ಹಂಪಿ ಟೈಮ್ಸ್ ಬಳ್ಳಾರಿ**

ಅಪಘಾತ, ತುರ್ತು ಶಸ್ತ್ರಚಿಕಿತ್ಸೆಗಳ ಸಂದರ್ಭದಲ್ಲಿ ಜೀವ ಉಳಿಸಲು ರಕ್ತ ಅವಶ್ಯಕವಾಗಿದ್ದು, ಆರೋಗ್ಯವಂತರು ತಪ್ಪದೇ ರಕ್ತದಾನ ಮಾಡಿ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಸಹಯೋಗ ಮತ್ತು ಮಿನೇರಾ ಸ್ಟೀಲ್ ಇವರ ಸಹಕಾರದಲ್ಲಿ ನಗರದ ಅನಂತಪುರ ರಸ್ತೆಯ ನೂತನ ಜಿಲ್ಲಾಡಳಿತ ಭವನದ ಆವರಣದಲ್ಲಿ ಮಂಗಳವಾರ ಆಯೋಜಿಸಿದ್ದ 'ಬೃಹತ್ ರಕ್ತದಾನ ಶಿಬಿರ'ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ರಕ್ತದಾನ ಮಾಡುವುದರಿಂದ ಹಲವಾರು ರೀತಿಯ ಪ್ರಯೋಜನಗಳಿದ್ದು, ಅದರಲ್ಲಿ ಹೊಸ ರಕ್ತದ ಉತ್ಪತ್ತಿ ಆಗುವುದರ ಜೊತೆಗೆ ರಕ್ತ ಚಲನೆಯ ಕಾರ್ಯತತ್ಪರತೆ ಮತ್ತು ಜ್ಞಾಪಕ ಶಕ್ತಿ ವೃದ್ಧಿಯಾಗುತ್ತದೆ ಎಂದರು.

ಈ ಹಿಂದೆ ಜೆಎಸ್‌ಡಬ್ಲ್ಯೂನಲ್ಲಿ 5000 ಯುನಿಟ್ ರಕ್ತ ಶೇಖರಿಸುವ ಮೂಲಕ ಕಲ್ಯಾಣ ಕರ್ನಾಟಕ ಭಾಗದಲ್ಲಿ ದೊಡ್ಡ ಮಟ್ಟದಲ್ಲಿ ದಾಖಲೆಯಾಗಿದೆ. ಮುಂಬರುವ ದಿನಗಳಲ್ಲಿಯೂ ರಕ್ತದಾನ ಶಿಬಿರಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ ಅವರು ಮಾತನಾಡಿ, ರಕ್ತದಾನವು ಒಂದು ಮಹಾದಾನ. ರಕ್ತದಾನ ಶಿಬಿರಗಳಲ್ಲಿ ಸಾರ್ವಜನಿಕರು ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಬೇಕು. ಆರೋಗ್ಯವಂತ ಪ್ರತಿಯೊಬ್ಬ ವ್ಯಕ್ತಿ ರಕ್ತದಾನ ಮಾಡುವುದರಿಂದ ಮತ್ತೊಬ್ಬರ ಆರೋಗ್ಯವನ್ನೂ ಸಹ ಉಳಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಮಾತನಾಡಿ, ಜಿಲ್ಲೆಯಲ್ಲಿ 2024–25 ರ ಸಾಲಿನಲ್ಲಿ 18,000 ಯುನಿಟ್ ಶೇಖರಿಸುವ ಮೂಲಕ ಮಾದರಿ ಜಿಲ್ಲೆಯಾಗಿದೆ. ಬೇರೆ ಜಿಲ್ಲೆಗಳಿಗೂ ಸಹ ರಕ್ತ ರವಾನಿಸಲಾಗುತ್ತಿದೆ. ಈ ಶಿಬಿರದಲ್ಲಿ 1500 ಯುನಿಟ್ ರಕ್ತ ಸಂಗ್ರಹಣೆ >> 4

# ವಾಹನ ಸವಾರರ ಗೋಳು ಕೇಳೋರ್ಯಾರು?



■ **ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣದ ತುಂಗಭದ್ರ ಶಿಕ್ಷಣ ಸಂಸ್ಥೆ ಬಳಿ ಉಜ್ಜಿನಿ ಹಾಗೂ ಜೋಳದ ಕೂಡ್ಲಿಗಿ ಮಾರ್ಗದ ರಸ್ತೆಯಲ್ಲಿನ ಗುಂಡಿಗಳು ವಾಹನ ಸವಾರರ ಜೀವಕ್ಕಾಗಿ ಕಾಯುತ್ತಿವೆ!

ಇಲ್ಲಿ ನಿತ್ಯ ಓಡಾಡುವ ವಾಹನ ಸವಾರರು ಪಾದ ಚಾರಿಗಳ ಗೋಳು ಕೇಳದ ಲೋಕೋಪಯೋಗಿ ಇಲಾಖೆ ಅಧಿಕಾರಿ ಗಳಿಗೆ ಹಾಗೂ ಜನ ಪ್ರತಿನಿಧಿ ಗಳನ್ನ ಶಪಿಸುತ್ತಾ ಸಾಗುತ್ತಿದ್ದಾರೆ. ಬೈಕ್ ಸವಾರರು ಇಲ್ಲಿ ಓಡಾಡುವುದು ಹರ ಸಾಹಸ, ವಾಹನಗಳನ್ನು ಚಲಾಯಿಸುವಾಗ ಮೈ ಕೈ ಬಿಗಿಹಿಡಿದು ಚಲಿಸಬೇಕು ಸ್ವಲ್ಪ ಮೈಮರೆತರು ಆಸ್ಪತ್ರೆ ಸೇರುವುದು ಶತ ಸಿದ್ದ ಎನ್ನುವ ಅಭಿಪ್ರಯ ಸವಾರರದ್ದಾಗಿದೆ.

ರಸ್ತೆಗಳಲ್ಲಿ ಗುಂಡಿ ಬಿದ್ದರು, ಲೋಕೋಪ ಯೋಗಿ ಇಲಾಖೆ ಅಧಿಕಾರಿಗಳು ಮತ್ತು ಜನ ಪ್ರತಿನಿಧಿಗಳು ನೋಡಿಯು ನೋಡದಂತೆ ಕಣ್ಮುಚ್ಚಿರುವುದು ಅವರ ನಿರ್ಲಕ್ಷ್ಯತೆಗಿಡಿದ ಕೈಗನ್ನಡಿ ಎನ್ನುವುದಕೆಕ ಸಾಕ್ಷಿಯಾಗಿಗೆ ಇಲ್ಲಿನ ಗುಂಡಿಗಳು.

ಮಳೆ ಬಂದಾಗ ಇಲ್ಲಿ ಹೆಚ್ಚು ನೀರು ನಿಲ್ಲುವುದರಿಂದ ರಸ್ತೆ ಸರಿಯಾಗಿ ಕಾಣದೆ ಬೈಕ್ ಸವಾರರು ಬಿದ್ದಿರುವ ಉದಾಹರಣೆ ಸಾಕಷ್ಟಿವೆ. ತಗ್ಗು ಗುಂಡಿಗಳ ರಸ್ತೆಯ ಸ್ಥಿತಿ ಕಂಡ ಪಟ್ಟಣದ ಹಸಿರು ಹೊನಲು ತಂಡವು ಪಕ್ಕದಲ್ಲಿನ ಮಣ್ಣನ್ನು ಹಾಕಿ ಗುಂಡಿ ಮುಚ್ಚಿ ಸವಾರರ ಸುಗಮ ಓಡಾಟಕ್ಕೆ ಅನುಕೂಲ ಕಲ್ಪಿಸಿದ್ದರು. ಮಳೆಗೆ ರಸ್ತೆ ಸಂಪೂರ್ಣ ಕೆಸರು ಗದ್ದೆಯಾಗಿ ಮಾರ್ಪಟ್ಟಿದೆ. ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಅವಘಡ ಸಂಭವಿಸುವ ಮುನ್ನ ಶೀಘ್ರ ರಸ್ತೆಗಳನ್ನು ದುರಸ್ತಿಪಡಿಸಿ. ನಿರ್ಲಕ್ಷ್ಯ ವಹಿಸಿದರೆ ಇಲ್ಲಿನ ರಸ್ತೆಯ ಅವಘಡಕ್ಕೆ ಜನಪ್ರತಿನಿಧಿಗಳು, ಅದಿಕಾರಿಗಳೆ ಹೊಣೆ ಹೋರಬೇಕಾಗುತ್ತದೆ ಎಂದು ಸಾರ್ವಜನಿಕರು ಎಚ್ಚರಿಸಿದ್ದಾರೆ




## ಬೆಳಕಿನ ಹಾದಿ

# ನಮ್ಮನ್ನು ಉಳಿಸಿ



ಅದೊಂದು ದೊಡ್ಡ ಕಾಡು ಅಲ್ಲಿ ವಾಸಿಸುತ್ತಿದ್ದವು ಹಲವು ಪ್ರಾಣಿಗಳು. 'ಯಾವುದೇ ಮನುಷ್ಯರ ಭಯವಿಲ್ಲದೆ ಓಡಾಡುತ್ತಿದ್ದವು'. ಒಂದು ದಿನ ಅಲ್ಲಿಗೆ ಒಬ್ಬ ಮನುಷ್ಯನ ಆಗಮನವಾಯಿತು. ಎಲ್ಲೋ ಹೊರಟವನು ಆ ಕಾಡಿನಲ್ಲಿ ದಣಿವಾರಿಸಿಕೊಳ್ಳಲು ಕುಳಿತ. ಸುತ್ತಲೂ ಹಸಿರು ತುಂಬಿದ ಆ ಜಾಗ ಅವನಿಗಿಷ್ಟವಾಯಿತು. ಊರಿಗೆ ಹೋದವನು ತನ್ನ ಪರಿಚಯದವರಿಗೆಲ್ಲಾ ಆ ಕಾಡಿನ ಕುರಿತು ತಿಳಿಸಿದ.

ವಿಷಯ ಕೇಳಿದ ಊರಿನವನೊಬ್ಬ ಕೊಡಲಿ ಹಿಡಿದು ಕಾಡಿಗೆ ಬಂದ. ಆಹಾ! ಎಷ್ಟೊಂದು ಮರಗಳಿವೆ ,ಒಂದು ಮರ ಕಡಿದರೆ ತೊಂದರೆ ಇಲ್ಲವೆನ್ನುತ್ತಲೇ ಹಸಿ ಮರಕ್ಕೆ ಕೊಡಲಿಯ ಪೆಟ್ಟು ಕೊಟ್ಟ. ಮರ ಧರೆಗುರುಳಿತು. ಅವನು ಕಟ್ಟಿಗೆ ಮಾಡಿಕೊಂಡು ಹಳ್ಳಿಗೆ ಹೋಗಿ ತನ್ನ ಪಕ್ಕದ ಮನೆಯ ಗಣೇಶನಿಗೆ ವಿಷಯ ತಿಳಿಸಿದ. "ಗಣೇಶನು ಕಾಡಿಗೆ ಬಂದು ಸುತ್ತಲೂ ಕಣ್ಣಾಡಿಸಲು ವಿವಿಧ ಬಗೆಯ ಹಣ್ಣುಗಳಿಂದ ತುಂಬಿದ ಮರಗಳ ಕಂಡನು. ತನ್ನ ದುರಾಸೆಯಿಂದ ಎಲ್ಲ ಹಣ್ಣುಗಳ ಕಿತ್ತುಕೊಂಡು ಚೀಲ ತುಂಬಿಸಿದವನು ಮನೆಗೆ ಬಂದು ತನ್ನ ನೆಂಟರಿಷ್ಟರಿಗೆ ಹಂಚಿದನು".

ಹೀಗೆ ಒಬ್ಬರ ನಂತರ ಒಬ್ಬರು ಬರಲಾಂಭಿಸಿದರು . ಒಬ್ಬರು ಕಟ್ಟಿಗೆಗೆ ಬಂದರೆ, ಮತ್ತೊಬ್ಬರು ಕಾಡು ಪ್ರಾಣಿಗಳ ಬೇಟೆಗೆ ಬಂದೂಕು ಹಿಡಿದು ಬಂದರು. ಕಾಡು ಪ್ರಾಣಿಗಳು ಸಹ ಭಯ ಭೀತಿಯಿಂದ ಅಡಗಿ ಕುಳಿತುಕೊಳ್ಳಲಾರಂಭಿಸಿದರು. " ನಮ್ಮನ್ನು ಉಳಿಸಿ" ಎಂಬ ಮೂಕ ರೋಧನೆ ಕೇಳುವುದೇ ಮನುಷ್ಯನಿಗೆ?.

ಕ್ರಮೇಣ ಒಬ್ಬರಿಂದ ಒಬ್ಬರಿಗೆ ವಿಷಯ ಹರಡಿ ಈ ಊರಿನ ಜನರು ಆ ಊರಿನ ಜನರೆಂದು ಕಾಡಿನೊಳಗೆ ಜನರ ಆಗಮನವಾಗಿ ಕಾಡು ನಾಶವಾಯಿತು. ಕಾಡನ್ನು ಅವಲಂಬಿಸಿರುವ ಕಾಡು ಪ್ರಾಣಿಗಳು ನಿಧಾನವಾಗಿ ನಾಡ ಪ್ರವೇಶಿಸಿ ಅಲ್ಲಿನ ಬೆಳೆಗಳ ಹಾಳು ಮಾಡಲು ಆರಂಭಿಸಿದವು. ಮನುಷ್ಯನ ದುರಾಸೆಗೆ ಕಾಡು ನಾಶವಾಯಿತು. ಪ್ರಾಣಿ ಪಕ್ಷಿಗಳು ಆಹಾರಕ್ಕಾಗಿ ನಾಡು ಸೇರಿದವು. ಮಾಡಿದ ತಪ್ಪಿಗೆ ಶಿಕ್ಷೆ ಅನುಭವಿಸಬೇಕು.

– ಸುವರ್ಣಾ ಭಟ್ಟ

ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com

HAMPI TIMES

## ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಪ್ರಕೃತಿಯ ಮೊದಲ ಹಬ್ಬ ಮಣ್ಣೆತ್ತಿನ ಅಮವಾಸ್ಯೆ

ಭಾರತ ಹಬ್ಬ ಹರಿದಿನಗಳ ದೇಶ. ಅದರಲ್ಲೂ ಕರ್ನಾಟಕದ ಸಂಸ್ಕೃತಿ ಮತ್ತು ಸಂಸ್ಕಾರಗಳಿಗೆ ವಿಶೇಷ ಮಹತ್ವವಿದೆ. ಕಲ್ಲು, ಮಣ್ಣು, ಪ್ರಕೃತಿಯಲ್ಲಿ ದೈವತ್ವವನ್ನು ಕಾಣುತ್ತೇವೆ. ಇಂತಹ ಪ್ರಕೃತಿ ಹಬ್ಬಗಳಲ್ಲಿ ಮಣ್ಣೆತ್ತಿನ ಅಮವಾಸ್ಯೆಯೂ ಒಂದು. ಮಣ್ಣೆತ್ತಿನ ಅಮವಾಸ್ಯೆಯನ್ನು ಬಸವನ ಅಮವಾಸ್ಯೆ ಎಂದೂ ಕರೆಯುತ್ತಾರೆ.

ನಮ್ಮ ಪೂರ್ವಜರು ಕಲ್ಲು ಮಣ್ಣಿನಲ್ಲಿಯೇ ದೈವತ್ವವನ್ನು ಕಂಡವರು. ಅದೇ ರೀತಿ ಈಗಲೂ ಅಂತದ್ದೇ ವಿಶೇಷ ಆಚರಣೆ ಇದು. ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದಲ್ಲಿ ಆಚರಿಸುವ ಹಬ್ಬ ಇದಾಗಿದೆ. ಹೆಸರಿಗೆ ತಕ್ಕಂತೆ ಮಣ್ಣಿನಿಂದ ಎತ್ತುಗಳನ್ನು ಅದನ್ನು ಪೂಜಿಸುವುದಾಗಿದೆ. ಗ್ರಾಮೀಣ ಭಾಗದಲ್ಲಿ ರೈತರು ತಮ್ಮ ಜಮೀನಿನಲ್ಲಿ ದುಡಿಯುವ ಎತ್ತುಗಳಿಗೆ ಗೌರವ ಸಲ್ಲಿಸುವ ಹಬ್ಬ ಇದಾಗಿದೆ. ಅಂದು ರೈತರು ತಮ್ಮ ಜಮೀನಿಗೆ ತೆರಳಿ, ಅಲ್ಲಿರುವ ಹದವಾದ ಮಣ್ಣನ್ನು ತಂದು ಜೋಡಿ ಎತ್ತುಗಳನ್ನು ತಯಾರಿಸುತ್ತಾರೆ. ನಂತರ ದೊಡ್ಡದಾದ ತಟ್ಟೆಯಲ್ಲಿ ಅಕ್ಕಿ ಹಾಗೂ ಕುಂಬಳ ಎಲೆಯನ್ನು ಇಟ್ಟು ಅದರ ಮೇಲೆ ಮಣ್ಣಿನ ಎತ್ತುಗಳನ್ನು ಇಟ್ಟು ದೇವರ ಕೋಣೆಯಲ್ಲಿಟ್ಟು ಪೂಜೆ ಮಾಡುತ್ತಾರೆ.



ಮಣ್ಣೆತ್ತಿನ ಅಮವಾಸ್ಯೆ ಯನ್ನು ಒಂದೊಂದು ಊರಿನಲ್ಲಿ ಒಂದೊಂದು ಪದ್ಧತಿಯಿಂದ ಆಚರಿಸುತ್ತಾರೆ. ನೈವೇದ್ಯಕ್ಕಾಗಿ ವಿವಿಧ ಖಾದ್ಯಗಳನ್ನು ತಯಾರಿಸು ತ್ತಾರೆ. ಕೆಲವು ಕಡೆ ಕರಿಗಡುಬು, ಕೆಲವು ಕಡೆ ಬೇಳೆ ಪಾಯಸ, ಕೆಲವು ಕಡೆ ಅಕ್ಕಿ ಪಾಯಸ ಮಾಡುತ್ತಾರೆ. ಹೀಗೆ ವಿವಿಧ ಅಡುಗೆ ಮಾಡಿ ಬಸವಣ್ಣನಿಗೆ ನೈವೇದ್ಯ ಮಾಡುತ್ತಾರೆ. ದೇವರ ಬಳಿ ತಮ್ಮ ಎತ್ತುಗಳಿಗೆ ಯಾವುದೇ ಖಾಯಿಲೆ, ತೊಂದರೆ ಬಾರದಂತೆ ಪ್ರಾರ್ಥನೆ ಮಾಡುತ್ತಾರೆ.



ಜಯಶ್ರೀ.ಎಂ.ಕರ್ಜಗಿ.
ಹುಬ್ಬಳ್ಳಿ

Scan For Digital Colourful
HAMPI TIMES E-paper

ಮಣ್ಣೆತ್ತುಗಳಿಗೆ ಹೂವಿನಿಂದ ಪೂಜಿಸಿ ಕಾಯಿ ಕರ್ಪೂರ, ಲೋಭಾನ ಆರತಿ ಮಾಡಿ ವಿವಿಧ ಸಿಹಿ ಪದಾರ್ಥಗಳನ್ನು ನೈವೇದ್ಯ ಮಾಡಿ ಒಟ್ಟಾಗಿ ಕುಳಿತು ಊಟ ಮಾಡುತ್ತಾರೆ. ಸಂಜೆ ವೇಳೆಗೆ ಹೊಳೆ, ಕೆರೆ, ಹರಿಯುವ ನೀರಿನ ದಂಡೆಗೆ ಹೋಗಿ ಮಣ್ಣೆತ್ತುಗಳ ಮುಖ ತೊಳೆದು ವಿಭೂತಿ ಕುಂಕುಮ ಹಚ್ಚಿ ಆರತಿ ಬೆಳಗಿ, ಮಳೆ ಬೆಳೆ ಸಮೃದ್ಧಿಗೆ ಬೇಡಿಕೊಂಡು ಎತ್ತುಗಳನ್ನು ನೀರಿಗೆ ಬಿಡುವುದು ಪೂರ್ವಜರ ಕಾಲದಿಂದಲೂ ನಡೆದು ಬಂದಿದೆ. ಈ ಆಚರಣೆಯಿಂದ ಭೂಮಿ ಮತ್ತು ರೈತನಿಗೆ ಬಲ ನೀಡುವ ಎತ್ತುಗಳನ್ನು ಗೌರವಿಸಿ ದಂತಾಗುತ್ತದೆ.

ರೈತರಿಗೆ ಎತ್ತುಗಳು ಕಣ್ಣುಗಳಿದ್ದರೆ. ಮಣ್ಣು ಅಂದರೆ ಭೂಮಿತಾಯಿ ದೇವರು ಇದ್ದಂತೆ. ಹೀಗಾಗಿ ರೈತರು ಎತ್ತು ಮತ್ತು ಮಣ್ಣನ್ನು ದೈವಸ್ವರೂಪಿ ಎಂದು ಪೂಜೆ ಮಾಡುತ್ತಾರೆ. ಇದರ ಫಲವಾಗಿ ಭೂತಾಯಿ ರೈತರಿಗೆ ಅನ್ನ ನೀಡುತ್ತಾಳೆ. ಹೀಗಾಗಿ ಮಣ್ಣು ಮತ್ತು ಎತ್ತುಗಳನ್ನು ರೈತರು ಪೂಜ್ಯನೀಯ ಭಾವದಿಂದ ಕಾಣುತ್ತಾರೆ.

ಭಾರತ ಕೃಷಿ ಪ್ರಧಾನ ದೇಶ. ಇಲ್ಲಿ ಅನ್ನ ಬೆಳೆಯುವ ರೈತನಿಗೂ ಹಾಗೂ ಅನ್ನ ನೀಡುವ ಭೂತಾಯಿಗೂ ಅವಿನಾಭಾವ ಸಂಬಂಧವಿದೆ. ರೈತ ಸಮುದಾಯ ಮಣ್ಣು ಮತ್ತು ತಮ್ಮ ಜಾನುವಾರುಗಳನ್ನು ಪ್ರೀತಿ ಮತ್ತು ಭಕ್ತಿಯಿಂದ ಕಾಣುತ್ತಾರೆ. ಹೀಗಾಗಿ ನಮ್ಮ ದೇಶದಲ್ಲಿ ಜಾನುವಾರುಗಳ ಸುತ್ತಲೂ ಅನೇಕ ಹಬ್ಬಗಳು ಬೆಸೆದುಕೊಂಡಿವೆ.

ಮಣ್ಣು ಮತ್ತು ಎತ್ತುಗಳನ್ನು ಕುರಿತು ಜನಪದರು ಅನೇಕ ಹಾಡುಗಳನ್ನು ಕಟ್ಟಿ ಹಾಡಿದ್ದಾರೆ. ಈಗಿನ ಆಧುನಿಕ ಅಬ್ಬರದ ಸಂಗೀತದಲ್ಲಿ ಅವುಗಳೆಲ್ಲ ಜನಮಾನಸದಿಂದ ದೂರವಾಗಿವೆ. ಹುಟ್ಟಿನಿಂದ ಚಟ್ಟದವರೆಗೂ ಮಣ್ಣು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ. ಅಂತಹ ಮಣ್ಣಿನ ಅರಿವು ಮೂಡಿಸುವುದೇ ಮಣ್ಣೆತ್ತಿನ ಅಮವಾಸ್ಯೆಯ ಪ್ರತೀಕ. ಅದರ ನಿಮಿತ್ತ ಪ್ರತಿ ವರ್ಷ ಜೇಷ್ಠ ಮಾಸದ ಅಮವಾಸ್ಯೆಯನ್ನು ಮಣ್ಣೆತ್ತಿನ ಅಮವಾಸ್ಯೆ ಎಂದು ಆಚರಿಸಲಾಗುತ್ತದೆ. ಕೃಷಿಕರಲ್ಲದವರ ಮನೆಗಳಲ್ಲೂ ಮಣ್ಣಿನ ಎತ್ತುಗಳನ್ನು ಪೂಜಿಸುವ ವಾಡಿಕೆ ಇದೆ.

ಇದನ್ನು ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಆಚರಿಸಲಾಗುತ್ತದೆ. ಜೇಷ್ಠ ಅಮವಾಸ್ಯೆ ಎಂದು, ದರ್ಶ ಅಮವಾಸ್ಯೆ ಎಂದೂ ಕರೆಯುತ್ತಾರೆ. ಹಿಂದೂ ಧರ್ಮದಲ್ಲಿ ಜೇಷ್ಠ ಮಾಸದ ಅಮವಾಸ್ಯೆಯನ್ನು ಬಹಳ ಮುಖ್ಯವಾದ ದಿನ ಎಂದು ಪರಿಗಣಿಸುತ್ತಾರೆ. ಈ ದಿನ ಪುಣ್ಯ ನದಿ ಅಥವಾ ಸರೋವರಗಳಲ್ಲಿ ಸ್ನಾನ ಮಾಡಿ ಪೂರ್ವಜನರಿಗೆ ಪೂಜೆ ಮಾಡಿ, ನೈವೇದ್ಯ ಸಲ್ಲಿಸುವ ಆಚರಣೆ ಇದೆ. ಇದನ್ನು ಮಾಡುವುದರಿಂದ ಪೂರ್ವಜರು ಸಂತುಷ್ಟ ರಾಗುತ್ತಾರೆ ಮತ್ತು ಪಿತೃದೋಷದಿಂದ ಮುಕ್ತರಾಗುತ್ತಾರೆ ಎಂದು ನಂಬಲಾಗಿದೆ.

ಈ ಅಮವಾಸ್ಯೆಯ ನಂತರ ಆಷಾಢ ಮಾಸವು ಆರಂಭವಾಗುತ್ತದೆ. ವರ್ಷಾರಂಭದಿಂದ ಐದು ಮುಖ್ಯ ಮಣ್ಣಿನ ಪೂಜೆಯನ್ನು ನೆರವೇರಿಸುವ ಸಂಪ್ರದಾಯವಿದೆ. ಆಷಾಢ, ಶ್ರಾವಣ ಮತ್ತು ಬಾದ್ರಪದ ಮಾಸಗಳು ಮಣ್ಣಿನ ಪೂಜೆಯ ದ್ಯೋತಕಗಳಾಗಿವೆ. ಮಣ್ಣೆತ್ತು, ಗುಳ್ಳೆವ್ವ, ಹುತ್ತಪ್ಪ, ಗಣಪ ಮತ್ತು ಜೋಕುಮಾರ–ಈ ಐದು ಹಬ್ಬಗಳಲ್ಲಿ ಮಣ್ಣಿನಿಂದ ವಿವಿಧ ವಿಗ್ರಹಗಳನ್ನು ಮಾಡಿ ಪೂಜಿಸಲಾಗುತ್ತದೆ.

ಅವುಗಳಲ್ಲಿ ಮಣ್ಣೆತ್ತಿನ ಅಮವಾಸ್ಯೆಯು ಆಶ್ವೀಜ ಬಹುಳ ಅಮವಾಸ್ಯೆಯು ಪ್ರಾಮುಖ್ಯತೆ ಹೊಂದಿದೆ. ದೀಪಾವಳಿ ಅಮವಾಸ್ಯೆಯಲ್ಲಿ ಧನಲಕ್ಷ್ಮಿ ಪೂಜೆಗೊಂಡರೆ, ಮಣ್ಣೆತ್ತಿನ ಅಮವಾಸೆಯಂದು ಧಾನ್ಯಲಕ್ಷ್ಮಿ ಪೂಜೆಗೊಳ್ಳುತ್ತಾಳೆ. ಇಡೀ ವರ್ಷಕ್ಕೆ ಬೇಕಾದ ಧಾನ್ಯಗಳನ್ನು ಬೆಳೆಯಲು ಮಣ್ಣು ಮತ್ತು ಎತ್ತುಗಳ ಅಗತ್ಯವಿದೆ. ಅದಕ್ಕಾಗಿ ಅವುಗಳಿಗೆ ಪೂಜೆ ಸಲ್ಲಿಸುವ ಸಂಪ್ರದಾಯ ಬೆಳೆದುಬಂದಿದೆ.

ಮಣ್ಣೆತ್ತಿನ ಅಮವಾಸ್ಯೆಯಗೆ ಸಂಬಂಧಿಸಿದಂತೆ ಒಂದು ರಮ್ಯವಾದ ಜನಪ್ರಿಯ ಕಥೆ ಇದೆ. ಒಮ್ಮೆ ಶಿವನು ಮಾರುವೇಷದಲ್ಲಿ ಒಬ್ಬ ರೈತನ ಬಳಿ ಬಂದು ನಿಮ್ಮ ಎತ್ತುಗಳನ್ನು ಕೆಲಕಾಲ ನನಗೆ ನೀಡಿ ಎಂದು ಕೇಳಿದನಂತೆ. ಆಗ ರೈತನು ಕುಹಕದಿಂದ ನಮ್ಮ ಎತ್ತುಗಳು ಮಣ್ಣಿನವು ಎಂದನಂತೆ. ನಂತರ ರೈತ ಕೊಟ್ಟಿಗೆಗೆ ಹೋಗಿ ನೋಡಿದರೆ ಎತ್ತುಗಳು ನಿಜವಾಗಿಯೂ ಮಣ್ಣಿನ ಎತ್ತುಗಳಾಗಿ ಬದಲಾಗಿದ್ದವಂತೆ. ಆಗ ರೈತ ಮತ್ತು ಆತನ ಕುಟುಂಬದವರು ಪಶ್ಚಾತ್ತಾಪದಿಂದ ಶಿವನನ್ನು ಪೂಜಿಸಿ ಪ್ರಾರ್ಥಿಸಿದಾಗ ಆ ಎತ್ತುಗಳು ಮರಳಿ ಜೀವಂತವಾದವಂತೆ. ಇಂದಿಗೂ ಹಬ್ಬದ ದಿನ ಹಿರಿಯರು ಮಕ್ಕಳನ್ನು ಕೂರಿಸಿಕೊಂಡು ಈ ಕಥೆಯನ್ನು ಹೇಳುವ ಪರಿಪಾಠವಿದೆ.

ಮುಂದೆ ಶ್ರಾವಣ ಬಾದ್ರಪದ ಮಾಸದಲ್ಲಿ ವಿವಿಧ ವ್ರತಗಳನ್ನು ವಿಶೇಷವಾಗಿ ಆಚರಿಸುವುದರಿಂದ ವ್ರತಗಳನ್ನು ಹೊತ್ತು ತರುವ ಹಬ್ಬ ಎಂಬ ಪ್ರತೀತಿಯೂ ಇದೆ. ಈ ಹಬ್ಬದ ನಂತರ ರೈತರು ಕೃಷಿ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ತೊಡಗುವರು. ಈ ವೇಳೆಯಲ್ಲಿ ಮೈಮರೆತರೆ ಜೀವನಕ್ಕೆ ಕಷ್ಟ ಎಂಬ ಎಚ್ಚರಿಕೆ ಈ ಹಬ್ಬದ ಆಚರಣೆಯಲ್ಲಿದೆ. ಬನ್ನಿ ನಾವೆಲ್ಲರೂ ಸೇರಿ ಮಣ್ಣೆತ್ತಿನ ಅಮವಾಸ್ಯೆಯನ್ನು ಸಂಭ್ರಮದಿಂದ ಆಚರಿಸೋಣ.

# ಇಂದಿನ ಮಕ್ಕಳಿಗೇನು ಬೇಕು ಸಂಸ್ಕಾರಯುತ ಶಿಕ್ಷಣವೋ? ತಂತ್ರಜ್ಞಾನಭರಿತ ಜೀವನವೋ?

ಮಮತಾಮೂರ್ತಿ, ಸಹನಾಮಯಿ, ಕ್ಷಮಯಾಧರಿತ್ರೀ – ಹೀಗೆ ಹಲವು ಸದ್ಗುಣಗಳ ಪಟ್ಟಿಯೇ ಬೆಳೆಯುತ್ತಾ ಹೋಗುತ್ತದೆ ತಾಯಿಯ ಕುರಿತು ಹೇಳುತ್ತಾ ಹೋದರೆ. ಅಂತೆಯೇ ಪ್ರೀತಿಯಕಡಲು, ತ್ಯಾಗಮಯಿ ಜೀವನ ತಂದೆಯದೆಂದು ಹೇಳುತ್ತೇವೆ. ಹಾಗಿದ್ದಲ್ಲಿ ಇಂತಹ ಪ್ರೇಮಮಯ ಹಾಗೂ ತ್ಯಾಗಮಯ ಗರಡಿಯಲ್ಲಿ ಬೆಳೆದ ಮಕ್ಕಳು ಉದಾತ್ತ ಸದ್ಗುಣಗಳ ಆಗರಗಳಾಗಬೇಕಾಗಿತ್ತು. ಆದರೆ, ವಾಸ್ತವದಲ್ಲಿ ಹಾಗಾಗಿದೆಯೇ? ಎಂದರೆ ಸಮರ್ಪಕ ಉತ್ತರಕ್ಕಾಗಿ ಯೋಚಿಸಬೇಕಾಗುತ್ತದೆ. ನೀವೇ ಊಹಿಸಿ. ಅಬ್ಬಾ! ಇದನ್ನೆಲ್ಲ ನೋಡಿದರೆ ನನಗೊಂದುಕಥೆ ನೆನಪಿಗೆ ಬರುತ್ತೆ.


ಒಬ್ಬ ತಾಯಿ ತನ್ನ ಮಗುವನ್ನು ಅತಿಯಾಗಿ ಮುದ್ದಿನಿಂದ ಸಾಕಿರುತ್ತಾಳೆ. ಹೀಗೆ ಬೆಳೆದ ಮಗುವನ್ನು ಶಾಲೆಗೆ ಕಳುಹಿಸುತ್ತಾಳೆ. ಶಾಲೆಗೆ ಹೋದ ಆ ಮಗು ಒಂದು ದಿನ ತನ್ನ ಸಹಪಾಠಿಯ ಪೆನ್ಸಿಲ್ ಕದ್ದು ತಂದು ಅಮ್ಮನ ಕೈಗಿಟ್ಟುತೋರಿಸುತ್ತದೆ. ಅದಕ್ಕೆ ಅಮ್ಮ ಸಂತೋಷಗೊಂಡು 'ಸರಿ, ಬರೆದುಕೋ ಹೋಗು' ಎನ್ನುತ್ತಾಳೆ. ಮತ್ತೊಂದು ದಿನ ಮಗು ಇನ್ನೊಬ್ಬ ಹುಡುಗನ ಕಂಪಾಸನ್ನು ಕದ್ದು ಅಮ್ಮನಿಗೆ ತೋರಿಸಿದರೆ ಈ ಸಲವೂ ಅಮ್ಮ ಹೊಡೆಯದೆ, ದಂಡಿಸದೆ ಸಂತೋಷಗೊಳ್ಳುತ್ತಾಳೆ. ಮತ್ತೊಂದು ದಿನ, ಹಣಕದ್ದು ತರುತ್ತಾನೆ. ಆಗಲೂ ಅಮ್ಮ ಬೈಯದೆ, ಗದರದೆ ಯಾವ ಒಂದು ಶಿಕ್ಷೆಯನ್ನೂ ವಿಧಿಸದೆ ಮೊದಲಿನಂತೆಯೇ ಸುಮ್ಮನಿರುತ್ತಾಳೆ. ಹೀಗೆ ಅಮ್ಮನ ವರ್ತನೆಯಿಂದ ಮಗು ಮುಂದೊಂದು ದಿನ ದೊಡ್ಡ ಕಳ್ಳನಾಗಿ ದರೋಡೆಕೋರನಾಗುತ್ತಾನೆ. ಪೊಲೀಸರ ಅತಿಥಿಯಾಗಿ ಕೊನೆಗೆ ಉಗ್ರವಾದ ಮರಣದಂಡನೆಯ ಶಿಕ್ಷೆಗೆ ಗುರಿಯಾಗುತ್ತಾನೆ. ಆಗ ಅಮ್ಮ, ಮಗನ ಬಳಿ ಓಡೋಡಿ ಬಂದು ಅಳುತ್ತಾ, ಗೋಳಾಡುತ್ತಾ ಎದೆ ಎದೆ ಬಡಿದು ಕೊಳ್ಳುತ್ತಾ ರೋದಿಸುತ್ತಾಳೆ. ಇದನ್ನೆಲ್ಲ ನೋಡುತ್ತಿದ್ದ ಮಗ 'ಇವತ್ತಿನ ನನ್ನ ಸ್ಥಿತಿಗೆ ನೀನೇ ಕಾರಣ.ಅಮ್ಮಾ, ಅವತ್ತು ನಾನು ಪೆನ್ಸಿಲ್‌ಕದ್ದು ತಂದಾಗ ನನಗೆ ನಾಲ್ಕು ಏಟು ಹಾಕಿ ಇನ್ನೊಬ್ಬರ ವಸ್ತುವನ್ನು ಮುಟ್ಟಬಾರದು ಎಂದು ಗದರಿದ್ದರೆ ಬಹುಶಃ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ, ಅದಕ್ಕೆ ನಿನ್ನಂತಹ ತಾಯಂದಿರುಗಳಿಗೆ ನಾನೊಂದು ಪಾಠವಾಗಬೇಕು. ನಿನ್ನ ಕಣ್ಣೆದುರಿಗೆ ನನ್ನನ್ನು ಗಲ್ಲಿಗೇರಿಸುವುದೇ ಸರಿ'ಯೆಂದ.



ಶಾಲಿನಿ ಎಂ
ಶಿಕ್ಷಕಿ, ಚಿತ್ರದುರ್ಗ

Scan For Digital Colourful
HAMPI TIMES E-paper

ಇದೊಂದು ಕಾಲ್ಪನಿಕ ಅಥವಾ ವಾಸ್ತವಿಕ ಘಟನೆಯೇ ಆಗಿರಬಹುದು. ಆದರೆ ಇಂದು ನಾವು ಪ್ರೀತಿಸುವ ಮಕ್ಕಳು ಹೀಗೆ ಹಾದಿ ತಪ್ಪುವಂತಾಗಿದೆ. ಮೇಲಿನ ಕಥೆಯಲ್ಲಿ ಸಂಸ್ಕಾರದ ಕೊರತೆಯಿಂದಾಗಿ ಮಗು ಕಳ್ಳನಾದರೆ, ಇಂದಿನ ನಮ್ಮ ಮಕ್ಕಳಿಗೆ ನಾವು ಒದಗಿಸುತ್ತಿರುವ ಅವರು ಬಯಸಿದ ಸ್ಮಾರ್ಟ್ ಫೋನ್, ಕೇಳಿದ ಬೈಕ್, ಸ್ಕೂಟರ್, ಪಾಕೆಟ್ ಮನಿ ಮೊದಲಾದ ಅಪಾರ ಸೌಲಭ್ಯಗಳಿಂದಾಗಿ ಅವರು ಹಿಡಿಯುತ್ತಿರುವ ಮಾರ್ಗ ಎಂಥದ್ದು ಎಂಬುದನ್ನು ಯೋಚಿಸದ ನಾವು ಇಂದು ನಮ್ಮ ಬಗೆಗೆ ತುಂಬಾ ಯೋಚಿಸುವ ಸ್ಥಿತಿಯನ್ನು ತಲುಪಿದ್ದೇವೆ. ಯಾಕೆಂದರೆ ಹಿಂದೆ ಮನೆಗಳಲ್ಲಿ ಹಿರಿಯರು ಇದ್ದರು. ಅವರು ಏನಾದರೂ ತಪ್ಪುಗಳಾದಾಗ ತಿದ್ದಿ ಬುದ್ಧಿ ಹೇಳುತ್ತಿದ್ದರು. ಆದರೆ ಇಂದು ಸಂಸ್ಕಾರ, ಸಂಸ್ಕೃತಿ, ಆಚಾರ–ವಿಚಾರ ಹೀಗೆ ಏನನ್ನೂ ಕಲಿಯದ, ಕಲಿಸದ ಪರಿಸ್ಥಿತಿ ನಿರ್ಮಾಣವಾಗಿದೆ. ಚಿಂತಿಸಿ, ತಂದೆ ತಾಯಿಯರೇ, ಪಾಲಕರೇ. ನಮ್ಮಂತೆ ನಮ್ಮ ಮಕ್ಕಳಾಗಬಾರದೆಂದು ಮಕ್ಕಳ ಮೇಲಿನ ವ್ಯಾಮೋಹದಿಂದ ನಮ್ಮ ಮಕ್ಕಳಿಗೆ ಏನನ್ನು ನೀಡಬೇಕು, ಎಷ್ಟನ್ನು ನೀಡಬೇಕು, ಹೇಗೆ ಅವರೊಂದಿಗೆ ಒಡನಾಟವನ್ನು ಬೆಳೆಸಿ ಕೊಳ್ಳಬೇಕು? ಎಂಬುದರ ನಿಟ್ಟಿನಲ್ಲಿ ಆಲೋಚಿಸಬೇಕಲ್ಲವೇ? ಮೊದಲು ನಮ್ಮ ಮಕ್ಕಳೊಂದಿಗೆ ಹೇಗೆ ವರ್ತಿಸಬೇಕು. ಅವರ ಮನಸ್ಥಿತಿ ಏನು ಎಂಬುದನ್ನು ತಿಳಿಯಬೇಕು. ನಮ್ಮ ಮಕ್ಕಳಿಗೆ ಭವಿಷ್ಯದ ಕನಸುಗಳ ಬಗ್ಗೆ ಮನವರಿಕೆ ಮಾಡಬೇಕು. ಅವರೊಟ್ಟಿಗೆ ಕಳೆಯುವ ಪ್ರತಿ ಕ್ಷಣಗಳೂ ಮೌಲ್ಯಯುತವಾಗಿರಬೇಕು. ಆದರೆ ಇಂದಿನ ವೇಗಮಯ ಬದುಕಿನಲ್ಲಿ ಬಿಡುವು ಎಂಬುದೇ ನಮಗಿಲ್ಲದಂತಾಗಿದೆ. ಎಲ್ಲದಕ್ಕೂ ಧಾವಂತ. ನಾವಾಯಿತು, ನಮ್ಮ ಕೆಲಸವಾಯಿತು ಎನ್ನುವಂತಾಗಿದೆ. ದೊಡ್ಡದೊಡ್ಡ ನಗರಗಳಲ್ಲಿ ಮಕ್ಕಳನ್ನು ನೋಡಿಕೊಳ್ಳಲು ಟೇಕ್‌ಕೇರ್, ಮದರ್ ಕೇರ್‌ಗಳ ಕೇಂದ್ರಗಳೇ ಆಸರೆಗಳಾಗಿವೆ. ಶಾಲೆಗಿಂತಲೂ ಟ್ಯೂಷನ್‌ಗಳ ವಿದ್ಯೆಯೇ ವೇದವಾಕ್ಯವಾದೆ. ದಿನವಿಡೀ ಮೊಬೈಲ್ ಫೋನ್‌ಗಳ ಸಹವಾಸವಾಗಿದೆ, ಸದ್ವಿದ್ಯೆ, ಸದಾಚಾರ, ಸಂಸ್ಕಾರ ಇವುಗಳನ್ನು ಹೇಳಿಕೊಡುವವರಾರು? ನಮ್ಮ ಮಕ್ಕಳಿಗೆ ನಾವು ಮೊದಲು ಸಂಸ್ಕಾರವನ್ನು ಕಲಿಸಿ ನಂತರ ವಿದ್ಯೆಯನ್ನು ಕಲಿಸಬೇಕಲ್ಲವೇ?



**"ವಿದ್ಯಾದದಾತಿ ವಿನಯಂ ವಿನಯಾದ್‌ಯಾತಿ ಪಾತ್ರತಾಮ್।**
**ಪಾತ್ರತ್ವಾತ್ ಧನಮಾಪ್ನೋತಿಧನಾತ್ ಧರ್ಮಂತತಃ ಸುಖಮ್॥"**

ಇದು ಸಂಸ್ಕೃತ ಶ್ಲೋಕ. ಇದರ ಅರ್ಥ: 'ವಿದ್ಯೆಯಿಂದ ವಿನಯ ಬರುತ್ತದೆ, ವಿನಯದಿಂದ ವ್ಯಕ್ತಿತ್ವ ವಿಕಸನವಾಗುತ್ತದೆ. ವ್ಯಕ್ತಿತ್ವದಿಂದ ಹಣ ಬರುತ್ತದೆ. ಹಣದಿಂದ ಧರ್ಮಕಾರ್ಯಗಳು ನೆರವೇರುತ್ತವೆ. ಮತ್ತು ಧರ್ಮ ಕಾರ್ಯಗಳಿಂದ ಸುಖ ಪ್ರಾಪ್ತಿಯಾಗುತ್ತದೆ.' ಆದ್ದರಿಂದ ಕೇವಲ ಅಕ್ಷರವಿದ್ಯೆಯೇ ಶಿಕ್ಷಣವಲ್ಲ. ತಂತ್ರಜ್ಞಾನದ ತಿಳುವಳಿಕೆಯೇ ಪರಿಪೂರ್ಣತೆಯಲ್ಲ. ಇವತ್ತಿನ ಮಕ್ಕಳಿಗೆ ತಂದೆ ತಾಯಿಯರೊಂದಿಗೆ ಒಡನಾಟವಿಲ್ಲ. ಶಿಕ್ಷಕರ ಬಗೆಗೆ ಗೌರವವಿಲ್ಲ, ಸ್ನೇಹಿತರೊಂದಿಗೆ ಪ್ರಾಮಾಣಿಕತೆಯಿಲ್ಲ. ಇಂತಹ ಮನಸ್ಥಿತಿ ನಮ್ಮ ಮಕ್ಕಳಲ್ಲಿ ಏಕಿದೆ? ಎಂದು ಯೋಚಿಸಿ. ಮಕ್ಕಳನ್ನು ಸರಿಯಾದ ನಿಟ್ಟಿನಲ್ಲಿ ಬೆಳೆಸಬೇಕಾಗಿದೆ. ಯಾರಿಗಾಗಿ ನಮ್ಮ ದುಡಿಮೆ? ಯಾರಿಗಾಗಿ ನಮ್ಮ ಪರಿಶ್ರಮ? ಯಾರಿಗಾಗಿ ಈ ಆಸ್ತಿ? ಯಾರಿಗಾಗಿ ಈ ಹಣ? ಯಾರಿಗಾಗಿ ಬದುಕು? ಎಂದು ಒಮ್ಮೆ ಯೋಚಿಸೋಣ. ನಮಗಾಗಿದ್ದರೆ ಯಾವುದರ ಚಿಂತೆ ಬೇಡ. ನಮ್ಮ ಮಕ್ಕಳಿಗಾಗಿ ಎನ್ನುವುದಾದರೆ ಅತಿತುರ್ತಾಗಿ ಚಿಂತಿಸುವ ಅಗತ್ಯವಿದೆ.

ಹಾಗಾದರೆಚಿಂತಿಸುವುದಾದರೆ ಹೀಗೆ ಚಿಂತಿಸೋಣ: ಮಕ್ಕಳ ನಡೆ, ನುಡಿ, ಹಾವ–ಭಾವಅವರ ಮನಸ್ಥಿತಿ, ಅವರ ಸ್ನೇಹಿತರ ವಲಯ ಎಂಥದ್ದು ಎಂಬುದನ್ನು ಮೊದಲು ಅರಿಯೋಣ. ಅಲ್ಲೇನಾದರೂ ಸ್ವಲ್ಪ ಅಸ್ತವ್ಯಸ್ತತೆ ಕಂಡು ಬಂದರೂ ತುಂಬಾ ಸೂಕ್ಷ್ಮವಾಗಿ ಪರಿಶೀಲಿಸಿ ಅವರ ಬಗ್ಗೆ ಹೆಚ್ಚಿನ ಕಾಳಜಿ ವಹಿಸೋಣ. ಅವರೊಟ್ಟಿಗೆ ಸ್ನೇಹಿತರಂತಿರೋಣ. ಅಂದಾಗ ಮಾತ್ರ ನಮ್ಮ ಮಕ್ಕಳನ್ನು ಸರಿದಾರಿಗೆ ತರಬಹುದು.

ಉತ್ತಮ ಸಮಾಜ ನಿರ್ಮಾಣದಲ್ಲಿ ಪಾಲಕ–ಪೋಷಕರ ಪಾತ್ರ ಬಹುಮುಖ್ಯವಾದುದು. 'ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು' ಎಂಬುದು ಕೇವಲ ಘೋಷಣೆಯ ಮಾತಾಗಬಾರದು. ಅದೊಂದು ಆಳವಾದ ಸತ್ಯ ಮತ್ತುತತ್ವವಾಗಬೇಕು. ತಂದೆ ತಾಯಿಗಳೇ ಪ್ರತ್ಯಕ್ಷ ದೈವ ಎನ್ನುವಂಥ ಕಾಲವೊಂದಿತ್ತು, ತಂದೆ–ತಾಯಿಗಳ ಕಾಲಿಗೆ ನಮಸ್ಕರಿಸಿ ಆಶೀರ್ವಾದ ತೆಗೆದುಕೊಳ್ಳುತ್ತಿದ್ದರು. ಆದರೆ ಇಂದು ಮಕ್ಕಳ ಕಾಲಿಗೇ ಬೀಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.! ಇಂದು ಮಕ್ಕಳಿಗೆ ತಂದೆ ತಾಯಿಯ ಆಶ್ರಯ ಬೇಕು, ತಂದೆ–ತಾಯಿಗಳು ಬೇಡ. ಅವರು ಕೊಡುವ ಹಣ ಬೇಕು. ಅವರ ಸಮಸ್ಯೆಗಳು ಬೇಡ. ಇವರ ಸಂತೋಷವೇ ಇವರಿಗೆ ಮುಖ್ಯ. ತಂದೆ–ತಾಯಿಯ ನೋವು–ನಲಿವು ಮುಖ್ಯವಾಗದ ಈ ಮಕ್ಕಳಿಗೆ ಮೊಬೈಲ್ ಫೋನ್ ಒಂದಿದ್ದರೆ ಸಾಕು. ಹುಚ್ಚು ಕೋತಿಗೆ ಹೆಂಡ ಕುಡಿಸಿದಂತೆ. ತುಂಬಾ ಮಾರಕವಾದ ಆನ್‌ಲೈನ್‌ಗೇಮ್, ಚಾಟಿಂಗ್, ವ್ಯಾಟ್ಸಪ್, ಫೇಸ್ಬುಕ್, ಇನ್ಸಾಗ್ರಾಂ–ಮೊದಲಾದುವುಗಳಲ್ಲಿ ವ್ಯಕ್ತಿತ್ವಕ್ಕೆ ಮಾರಕವಾದ, ಅಸಭ್ಯವಾದ, ಅನಗತ್ಯವಾದ, ಅವೈಚಾರಿಕ ವಾದ ವಿಚಾರಗಳ ನೋಟ!! ಹೀಗೆ ಇದರಿಂದ ಅದೆಷ್ಟು ಅನಾಹುತಗಳು ನಡೆದುಹೋಗಿವೆ. ಕರೆನ್ಸಿ ಹಾಕಿಸಿಲ್ಲವೆಂದು ತಂದೆಯನ್ನೇ ಕೊಲ್ಲುವ ಮಟ್ಟಕ್ಕೆ ಹೋಗಿಲ್ಲವೇ? ಮೊಬೈಲ್ ಗೇಮ್‌ಗಳಿಗೆ ದಾಸರಾಗಿ ಕಣ್ಣು ಕಳೆದುಕೊಂಡಿದ್ದು, ಆತ್ಮಹತ್ಯೆಗೆ ಶರಣಾದದ್ದು – ಹೀಗೆ ಒಂದೇ ಎರಡೇ? ಇವುಗಳನ್ನು ನಿಯಂತ್ರಿಸಲು ಮೊದಲು ಪಾಲಕರಾದ ನಾವು ಸ್ವಾಮಿ ವಿವೇಕಾನಂದರ ಮಾತಿನಂತೆ, ಬೆಲ್ಲ ತಿನ್ನುವುದನ್ನು ಬಿಡಿಸಬೇಕಾದರೆ, ನಾವು ತಿನ್ನುವುದನ್ನು ಮೊದಲು ಬಿಡಬೇಕು.ಹೆಳವನ ಹೆಗಲ ಮೇಲೆ ಕುರುಡ ಕೂತಂತಾಗಿ ದಾರಿ ಸಾಗೀತೆ? ಎಂಬಂತಾಗುತ್ತದೆ. ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಳ್ಳಬೇಕು ನಿಜ. ಅಸಂಖ್ಯ ಉಪಯುಕ್ತವಾದ ಜ್ಞಾನಸಾಧನೆಯ ಮಾಹಿತಿಗಳು ರಾಶಿ ರಾಶಿ ದೊರೆಯುತ್ತವೆ. ಅವುಗಳತ್ತ ಅವರಚಿತ್ತ ಹರಿಯುವಂತಾಗಬೇಕು. ಮಾನವೀಯ ಹಾಗೂ ನೈತಿಕ ಮೌಲ್ಯಗಳು ನಮ್ಮ ಮಕ್ಕಳಲ್ಲಿ ಮೈಗೂಡುವಂತಹ ಶಿಕ್ಷಣದ ಜೊತೆಗೆ ಆಧುನಿಕ ತಂತ್ರಜ್ಞಾನದ ತಿಳುವಳಿಕೆ ಮೇಳೈಸಿದಾಗ ಮಾತ್ರ ಪರಿಪೂರ್ಣ ವ್ಯಕ್ತಿತ್ವ ರೂಪುಗೊಳ್ಳಲು ಸಾಧ್ಯ. ನಾವು ಮಗುವಾಗಿದ್ದಾಗ ಅಮ್ಮ ನಮ್ಮ ಆರೈಕೆ, ಕಾಳಜಿಗಾಗಿ ಅದೆಷ್ಟೋ ನಿದ್ದೆ ಇಲ್ಲದ ರಾತ್ರಿಗಳನ್ನು ಕಳೆದಿಲ್ಲ? ವ್ರತ, ಉಪವಾಸ ಹೀಗೆ ಏನೆಲ್ಲ ಮಾಡಿಲ್ಲ! ಇನ್ನು ಅಪ್ಪನ ತೂತು ಬಿದ್ದ ಬನಿಯನ್ ಅದೆಷ್ಟು ಕಥೆ ಹೇಳುತ್ತೆ! ಆದರೆ ಅದಾವುದನ್ನು ಗಮನಿಸದೇ ಅಪ್ಪನ ಕೋಪ ಒಂದೇ ನಮಗೆ ನೋವು ತರುತ್ತದೆ.ಒಂದೇ ಒಂದು ಸಾರಿ ಯೋಚಿಸಿ. ನಾವು ಏಕೆ ಹೀಗೆ ಎಂದು?

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಕೊಪ್ಪಳ-ಸೌರ ಕೃಷಿ ಉದ್ಯೋಗ ಉತ್ಸವ

## ಜೂ. 26ರಿಂದ ಎರಡು ದಿನ | ಕೃಷಿ ಇಲಾಖೆ ಜಂಟಿ ನಿರ್ದೇಶಕ ಟಿ.ಎಸ್. ರುದ್ರೇಶಪ್ಪ ಹೇಳಿಕೆ

■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲಾಡಳಿ, ಜಿಲ್ಲಾ ಪಂಚಾಯತ್, ಕೃಷಿ ಇಲಾಖೆ ಹಾಗೂ ಸೆಲ್ಕೊ ಫೌಂಡೇಶನ್ ವತಿಯಿಂದ ಜೂನ್ 26 ಮತ್ತು 27 ರಂದು ಎರಡು ದಿನಗಳ ಕಾಲ "ಕೊಪ್ಪಳ-ಸೌರ ಕೃಷಿ ಉದ್ಯೋಗ ಉತ್ಸವ"ವನ್ನು ಕೊಪ್ಪಳ ನಗರದ ಕತಾರೆ ಕಲ್ಯಾಣ ಮಂಟಪದದಲ್ಲಿ ಹಮ್ಮಿಕೊಳ್ಳಲಾಗಿದ್ದು, ಇದರ ಸದುಪಯೋಗವನ್ನು ಜಿಲ್ಲೆಯ ರೈತರು ಪಡೆದುಕೊಳ್ಳಬೇಕೆಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಟಿ.ಎಸ್. ರುದ್ರೇಶಪ್ಪ ಹೇಳಿದರು.

ಅವರು ಮಂಗಳವಾರ ಕೊಪ್ಪಳ ನಗರದ ಪ್ರವಾಸಿ ಮಂದಿರದ ಸಭಾಂಗಣದಲ್ಲಿ ಕೊಪ್ಪಳ-ಸೌರ ಕೃಷಿ ಉದ್ಯೋಗ ಉತ್ಸವ-2025ರ ಕುರಿತು ಮಾಹಿತಿ ನೀಡಲು ಕರೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಜಿಲ್ಲೆಯ ರೈತರು, ಎಸ್.ಡಿ.ಓ., ಎಸ್.ಎಸ್.ಜಿ. ಎನ್. ಆರ್.ಎಲ್.ಎಂ.ಗಳಿಗೆ ಸ್ವಯಂ ಉದ್ಯೋಗಕ್ಕಾಗಿ ರೊಟ್ಟಿ ಮತ್ತು ಹಪ್ಪಳ ತಯಾರಿಸುವ ಯಂತ್ರಗಳನ್ನು ನೀಡಲಾಗಿದ್ದು, ಅವುಗಳನ್ನು ವಿದ್ಯುತ್ ಮೂಲಕ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಇದರ ಬದಲಿಗೆ ಸೌರ ಶಕ್ತಿ ಮೂಲಕ ಯಾವ ರೀತಿ ಬಳಕೆ ಮಾಡಬೇಕೆಂಬುವುದನ್ನು 30ಕ್ಕೂ ಹೆಚ್ಚು ಪ್ರಾತ್ಯಕ್ಷಿಕೆ ಹಾಗೂ ಸ್ಟಾಲ್‌ಗಳನ್ನು ಮಾಡಲಾ ಗುತ್ತಿದೆ. ಸೌರ ಶಕ್ತಿಯಿಂದ ಬಳಕೆ ಮಾಡಬಹುದಾದ ಕೃಷಿಗೆ ಸಂಬಂಧಿ ಸಿದ ಯಂತ್ರಗಳು, ಸ್ವಉದ್ಯೋಗಕ್ಕಾಗಿ ಬೇಕಾಗುವ ಯಂತ್ರೋಪಕರಣಗಳನ್ನು ಸಹಾಯಧನ ರೂಪದಲ್ಲಿ ನೀಡಲಾ ಗುತ್ತಿದೆ. ಇದರ ಬಗ್ಗೆ



ಜಾಗೃತಿ ಮೂಡಿಸುವುದರ ಜೊತೆಗೆ ಸಾಲ ಮತ್ತು ಸಹಾಯಧನ ಸೌಲಭ್ಯಕ್ಕೆ ಸಂಬಂಧಿದಂತೆ ಸೂಕ್ತ ಮಾಹಿತಿ ನೀಡಲಾಗುವುದು ಹಾಗೂ ಬ್ಯಾಂಕುಗಳ ಅಧಿಕಾರಿಗಳೊಂದಿಗೆ ಚರ್ಚೆಗೂ ಅವಕಾಶ ಮಾಡಿಕೊಡಲಾಗುವುದು ಎಂದರು.

ರೈತರಿಗೆ ಮತ್ತು ಸ್ವ ಸಹಾಯ ಗುಂಪಿನ ಮಹಿಳೆಯರಿಗೆ ಹೊಂದಿಕೊಳ್ಳುವ ಮಹಿಳಾ ಹಾಗೂ ರೈತ ಸ್ನೇಹಿ ತಂತ್ರಜ್ಞಾನಗಳ ಕುರಿತು ತಿಳುವಳಿಕೆ ಹಾಗೂ ಪ್ರಾತ್ಯಕ್ಷಿಕೆ ಏರ್ಪಡಿಸಲಾಗಿದೆ. ಎರಡು ದಿನಗಳ ಕಾಲ ನಡೆಯುವ ಕೊಪ್ಪಳ-ಸೌರ ಕೃಷಿ ಉದ್ಯೋಗ ಉತ್ಸವದಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಸೆಲ್ಕೊ ಫೌಂಡೇಶನ್ ತಂತ್ರಜ್ಞರು ಹಾಗೂ ಮತ್ತಿತರರು ಪಾಲ್ಗೊಳ್ಳಲಿದ್ದಾರೆ. ಜಿಲ್ಲೆಯ ರೈತರು, ಸಂಜೀವಿನಿ ಮತ್ತು ಎನ್.ಆರ್.ಎಲ್.ಎಂ, ಸ್ವಸಹಾಯ ಗುಂಪುಗಳ ಸದಸ್ಯರು ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಹೇಳಿದರು.

ಸೆಲ್ಕೊ ಫೌಂಡೇಶನ್ ಮ್ಯಾನೆಜರ್ ಪ್ರಕಾಶ ಮೇಟಿ ಮಾತನಾಡಿ, ಕಳೆದ 15 ವರ್ಷಗಳಿಂದ ದೇಶಾದ್ಯಂತ ಸುಸ್ಥಿರ ಅಭಿವೃದ್ಧಿ ಹಾಗೂ ಸೌರ ವಿದ್ಯುತ್ ವಿಭಾಗದಲ್ಲಿ ಸೆಲ್ಕೋ ಫೌಂಡೇಶನ ಹೊಸ ಆವಿಷ್ಕಾರಗಳನ್ನು ಮಾಡುತ್ತಾ ಬರುತ್ತಿದೆ. ಜಿಲೆಯಾದ್ಯಂತ 200 ವಿಶೇಷಚೇತನರಿಗೆ ಸ್ವಾವಲಂಬನೆಯ ಜೀವನವನ್ನು ಕಟ್ಟಿಕೊಳ್ಳಲು ಸಹಾಯ ಮಾಡಿದೆ ಹಾಗೂ 200ಕ್ಕೂ ಹೆಚ್ಚು ಪ್ರಾಥಮಿಕ ಆರೋಗ್ಯಕ್ಕೆ ಕೇಂದ್ರಗಳನ್ನು ಸೌರಯುಕ್ತಗಳನ್ನಾಗಿಸಿದೆ. ಕೃಷಿ ಹೈನುಗಾರಿಕೆ ಅವಲಂಬಿತ ರೈತರಿಗೆ 500 ಕ್ಕೂ ಹೆಚ್ಚು ಸೌರ ವಿದ್ಯುತ್ ಅಳವಡಿಸಲು ಯಶಸ್ವಿಯಾಗಿದ್ದೇವೆ. ಮಹಿಳೆಯರಿಗೆ ಮಾರುಕಟ್ಟೆಗೆ ಸಂಬಂಧಿಸಿದಂತೆ ತರಬೇತಿಯನ್ನು ನೀಡಿದ್ದೇವೆ ಎಂದರು.

ಕೊಪ್ಪಳ ನಗರದ ಕತಾರೆ ಕಲ್ಯಾಣ ಮಂಟಪದಲ್ಲಿ ಜೂ. 26 ರಂದು ರೈತರಿಗೆ ಕೃಷಿಗೆ ಸಂಬಂಧಿಸಿದಂತೆ ಯಂತ್ರೋಪಕರಣಗಳ ಪ್ರಾತ್ಯಕ್ಷಿಕೆ ಮತ್ತು ಜೂ. 27 ರಂದು ಸ್ವ ಸಹಾಯ ಗುಂಪಿನ ಮಹಿಳೆಯರಿಗೆ ಸೌರ ಸ್ವ ಉದ್ಯೋಗ ಮೇಳವನ್ನು ಏರ್ಪಡಿಸ ಲಾಗಿದೆ. ಈ ಕಾರ್ಯಕ್ರಮ ರೈತರಿಗೆ ಹಾಗೂ ಸ್ವ ಸಹಾಯ ಗುಂಪಿನ ಮಹಿಳೆಯರಿಗೆ ಸೌರ ಸ್ವ ಉದ್ಯೋಗಕ್ಕೆ ತುಂಬಾ ಅನುಕೂಲವಾಗಲಿದ್ದು, ಮಹಿಳಾ ಹಾಗೂ ರೈತ ಸ್ನೇಹಿ ತಂತ್ರಜ್ಞಾನಗಳ ಕುರಿತು ತಿಳುವಳಿಕೆ ಮತ್ತು ಪ್ರಾತ್ಯಕ್ಷಿಕೆ ಏರ್ಪಡಿಸಲಾಗಿದೆ. ಇದರ ಸದುಪಯೋಗವನ್ನು ಕೊಪ್ಪಳ ಜಿಲ್ಲೆಯ ಸಾರ್ವಜನಿಕರು ಪಡೆದು ಕೊಳ್ಳಬೇಕು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಸುರೇಶ ಜಿ. ಹಾಗೂ ಮಾಧ್ಯಮ ಪ್ರತಿನಿಧಿಗಳು ಸೇರಿದಂತೆ ಕೃಷಿ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳು, ಸೆಲ್ಕೋ ಫೌಂಡೇಶನ್ ಪ್ರತಿನಿಧಿಗಳು ಉಪಸ್ಥಿತರಿದ್ದರು.

**ಕವಿ ಮನಸು**

### ಯುದ್ಧ

ಯುದ್ಧ ಯಾಕೆ ಬೇಕು
ಕಿತ್ತೆಸೆಯಿರಿ ಬಂದುಕು
ಶಾಂತಿ ನೆಮ್ಮದಿ ಇರದು
ಕಳೆದು ಹೋದ ಜೀವ ಬರದು

ಒಣ ಪ್ರತಿಷ್ಠೆ ಬಿಟ್ಟು ಬಿಡಿರಿ
ಒಣ ದೀಮಾಕು ಬಿಟ್ಟುಬಿಡಿರಣ್ಣ
ಎಲ್ಲರ ಜೀವ ಒಂದೆ ತಿಳಿಯಿರಣ್ಣ
ಪರಸ್ಪರ ಹೊಂದಾಣಿಕೆ ಬೆಳೆಸಿರಣ್ಣ।

ಶತ ಶತಮಾನದಿ ಬಾಳಿದ ಮನೆಗೆ
ತುಂಬಿದ ಸಂಸಾರದಿ ಇರುವ ಮನೆಗೆ
ಬಾಂಬ ಹಾಕಿ ಮನೆ ಸ್ಮಶಾನ ಮಾಡುವಿರಿ
ಚಿತ್ತಾರದ ಸದ್ದಿನಲ್ಲಿ ಹಾಡು ಹಾಡುವಿರಿ।

ಆಗ ಇದ್ದರು ರಾಜ್ ಮಹಾರಾಜರು
ಅವರೂ ಆಗಾಗ ಕಾದಾಡಿ ಸತ್ತರು
ಆ ಕಾಲ ಬೇರೆ ಈ ಕಾಲವೇ ಬೇರೆ
ನೀವು ಬುದ್ಧಿ ಇದ್ದವರು ಯುದ್ಧ ಯಾಕೆ
ಮಾಡುವಿರಿ।

ನೀವಿರುವ ನೆಲದಲ್ಲಿ ನೀವು ವಾಸಿಸಿರಿ
ಅವರಿವ ನೆಲದಲ್ಲಿ ಅವರು ವಾಸಿಸಲಿ
ಸಂಪತ್ತು ಹೆಚ್ಚಾದರೆ ನೆಲ ಜಲ ಅಭಿವೃದ್ಧಿ
ಪಡಿಸಿರಿ
ಅನಿಷ್ಟ ಬಾಂಬು ಕ್ಷಿಪಣಿಗೆ ಏಕೆ ಖರ್ಚು
ಮಾಡುವಿರಿ।

ನಾನು ಬಲಿಷ್ಠ ನೀನು ಬಲಿಷ್ಠ ನೆಂದು
ಹಾರಾಡದಿರಿ
ಮಾನವ ಜನಾಂಗವನ್ನು ನಾಶ ಮಾಡದಿರಿ
ಈ ಭೂಮಿಯನ್ನು ರಣರಂಗ ಮಾಡದಿರಿ
ಅಶಾಂತಿಯ ಹೊಗೆ ಎಬ್ಬಿಸಿ ಅದರಲಿ
ನೀವು ಸಾಯದಿರಿ।

– ಚಂದ್ರಶೇಖರಯ್ಯ ರೋಣದಮಠ

### ನೆನಪು

ಮನಸಿನಲಿ ಇರುವ ಸವಿ ನೆನಪು
ಭಾವನೆಗಳಿಗೆ ತರುವುದು ಹೊಸ ಒನಪು
ಸವಿಯಾದ ಕ್ಷಣಗಳ ಮರು ಹೊಳಪು
ಇರದಿರೆ ಬದುಕು ಕಪ್ಪು ಬಿಳುಪು

ಗತಿಸಿದ ಘಟನೆಯ ನೆನಪಿನ ಮೆಲುಕು
ಮನವನು ಮಾಡುವುದು ಇಂದಿಗೂ
ಚುರುಕು
ವರ್ತಮಾನವ ಅರಿತು ಹೆಜ್ಜೆ ಹಾಕು
ನಂಬಿಕೆಯ ಮೇಲೆ ನಿಂತಿರುವುದು ಬದುಕು

ಹರೆಯದ ದಿನಗಳಲ್ಲಿ ಮೂಡುತ್ತಿದ್ದ
ಭಾವನೆ
ಕಂಗಳಲ್ಲಿ ಕಾಣುತ್ತಿದ್ದ ಸುಂದರ ಕಲ್ಪನೆ
ಹೇಳಲಾಗದೆ ಉಳಿದ ಅದೆಷ್ಟೋ ವೇದನೆ
ನೆನಪುಗಳೇ ಇಲ್ಲದ ಬದುಕೇಕೆ ಸುಮ್ಮನೆ

ನೆನಪಿನಿಂದಲೇ ನಮ್ಮ ನಿಮ್ಮೆಲ್ಲರ ಅಸ್ತಿತ್ವ
ನೆನಪು ಮರೆತರೆ ಇರದಾವ ಸತ್ವ
ಸೆಳೆಯುವುದು ಎಲ್ಲವನೂ ಇದರ ಗುರುತ್ವ
ಮನಗಾಣುವ ಅವಿರತ ನೆನಪುಗಳ ಮಹತ್ವ

– ಚೇತನ ಭಾರ್ಗವ, ಬೆಂಗಳೂರು

### ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ । ಸಂವತ್ಸರ: ವಿಶ್ವಾವಸು

**25-06-2025 – ಬುಧವಾರ**

| | |
|---|---|
| ತಿಥಿ | : ಅಮವಾಸ್ಯೆ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಮೃಗಶಿರ |
| ಯೋಗ | : ಗಂಡ |
| ಕರಣ | : ವೃದ್ಧಿ |
| ಸೂರ್ಯೋದಯ | : 05:44:15 |
| ಸೂರ್ಯಾಸ್ತ | : 19:15:02 |
| ರಾಹು ಕಾಲ | : 12:30-14:11 |
| ಯಮಘಂಡ ಕಾಲ | : 07:26-09:07 |
| ಗುಳಿಕ ಕಾಲ | : 10:48-12:30 |

### ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ : 24-06-2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1614.94 ಅಡಿ |
| ಒಳ ಹರಿವು | 23366 ಕ್ಯುಸೆಕ್ |
| ಹೊರ ಹರಿವು | 196 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 48.270 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1581.73 ಅಡಿ |
| ಒಳ ಹರಿವು | 1056 ಕ್ಯುಸೆಕ್ |
| ಹೊರ ಹರಿವು | 2037 ಕ್ಯುಸೆಕ್ |
| ಸಾಮರ್ಥ್ಯ | 5.370 ಟಿಎಂಸಿ |

# ಅಲ್ಪಸಂಖ್ಯಾಂತ ವಿದ್ಯಾರ್ಥಿಗಳ ಶುಲ್ಕ ಮರುಪಾವತಿಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

2025-26 ನೇ ಸಾಲಿನ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಎಸ್‌ಎಸ್‌ಪಿ ರಾಜ್ಯ ವಿದ್ಯಾರ್ಥಿವೇತನ ಯೋಜನೆಯಡಿಯಲ್ಲಿ ಪ್ರವೇಶಾತಿ ಶುಲ್ಕ ಮರುಪಾವತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಗುಡ್ಡಪ್ಪ ಜಿಗಳಿಕೊಪ್ಪ ತಿಳಿಸಿದ್ದಾರೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ವ್ಯಾಪ್ತಿಗೆ ಬರುವ ಪಿಯುಸಿ, ಡಿಪ್ಲೋಮ, ಪದವಿ, ತಾಂತ್ರಿಕ ಮತ್ತು ವೃತ್ತಿಪರ ಕೋರ್ಸ್ ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ವಿದ್ಯಾರ್ಥಿಗಳಿಗೆ ಎಸ್‌ಎಸ್‌ಪಿ ಆನ್‌ಲೈನ್ https://ssp.postmatric.karnataka.gov.in ಪೋರ್ಟಲ್ ಮೂಲಕ ಸೆ.30 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಕಳೆದ ಸೆಮಿಸ್ಟರ್‌ನ ವಾರ್ಷಿಕ ಪರೀಕ್ಷೆಯಲ್ಲಿ ಕನಿಷ್ಠ ಶೇ.50 ರಷ್ಟು ಅಂಕ ಪಡೆದಿರಬೇಕು, ಪೋಷಕರ ವಾರ್ಷಿಕ ಆದಾಯ ರೂ.2 ಲಕ್ಷ ಮೀರಿರಬಾರದು. ಯೋಜನೆಯ ಪ್ರಯೋಜನ ಪಡೆಯುವ ವಿದ್ಯಾರ್ಥಿಗಳು ಬ್ಯಾಂಕ್ ಖಾತೆ ಆಧಾರ್ ಸೀಡಿಂಗ್ ಮತ್ತು ಎನ್‌ಪಿಸಿಐ ಮ್ಯಾಪಿಂಗ್ ಆಕ್ಟಿವ್ ಆಗಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು.

ಹೆಚ್ಚಿನ ಮಾಹಿತಿಗಾಗಿ http://dom.karnataka.gov.in ವೆಬ್‌ಸೈಟ್‌ನ್ನು ವೀಕ್ಷಿಸಬಹುದು,ದೂ.8277799990, 8050435366, 9980237242, 7353696984, 849492781 ಸಂಖ್ಯೆಗೆ ಕರೆ ಮಾಡಬಹುದು ಅಥವಾ ಜಿಲ್ಲಾ, ತಾಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದ್ದಾರೆ

# ಬಿಎಸ್ಸಿ ನರ್ಸಿಂಗ್, ಜಿಎನ್‌ಎಂ ನರ್ಸಿಂಗ್ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನಕ್ಕೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

2025-26ನೇ ಸಾಲಿಗೆ ಬಿಎಸ್ಸಿ ನರ್ಸಿಂಗ್, ಜಿಎನ್‌ಎಂ ನರ್ಸಿಂಗ್ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲು ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಗುಡ್ಡಪ್ಪ ಜಿಗಳಿಕೊಪ್ಪ ಅವರು ತಿಳಿಸಿದ್ದಾರೆ.

ಅರ್ಹ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಸೆಪ್ಟಂಬರ್ 30 ರಂದು ಕೊನೆಯ ದಿನಾಂಕವಾಗಿದೆ.

ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ) ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಕೋರ್ಸ್ ಪೂರ್ಣಾವಧಿಯಾಗಿರಬೇಕು. ಉತ್ತೇಜನ ಮೊತ್ತವನ್ನು ಪಡೆಯಲು ಹಿಂದಿನ ವರ್ಷದ ಪರೀಕ್ಷೆಯಲ್ಲಿ ಕನಿಷ್ಠ ಶೇ.50 ಕ್ಕಿಂತ ಕಡಿಮೆ ಅಂಕಗಳಿಸಿರುವ ವಿದ್ಯಾರ್ಥಿಗಳ ಅರ್ಜಿಗಳನ್ನು ಸಹ ಮೆರಿಟ್ ಆಧಾರದ ಮೇಲೆ ಪರಿಗಣಿಸಲಾಗುವುದು. ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷಗಳು ಮೀರಿರಬಾರದು. ವಿದ್ಯಾರ್ಥಿಗಳನ್ನು ಅನುದಾನದ ಲಭ್ಯತೆ ಅನುಸಾರ ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುವದು. ಯೋಜನೆಯಡಿ ಉತ್ತೇಜನ ಮೊತ್ತವನ್ನು ಪಡೆಯಲು ಪ್ರತಿ ಶೈಕ್ಷಣಿಕ ವರ್ಷದಲ್ಲಿ ಹೊಸ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಅರ್ಜಿದಾರರು https://sevasindhu.karnataka.gov.in ಈ ಮೂಲಕ ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ http://dom.karnataka.gov.in ಅನ್ನು ವೀಕ್ಷಿಸಿ, ಮಾಹಿತಿಗಾಗಿ ಜಿಲ್ಲಾ ಕಚೇರಿ ವಿಜಯನಗರ ಮತ್ತು ಜಿಲ್ಲಾ ಹಾಗೂ ತಾಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಿಗೆ ಸಂಪರ್ಕಿಸಬಹುದಾಗಿದೆ. ಹೊಸಪೇಟೆ-8050435366, ಕೂಡ್ಲಿಗಿ ಮತ್ತು ಕೊಟ್ಟೂರು-9060330060, ಹರಪನಹಳ್ಳಿ-8494927891, ಹೂವಿನಹಡಗಲಿ-7353696984, ಹಗರಿಬೊಮ್ಮನಹಳ್ಳಿ-9980237242 ಆಯಾ ತಾಲೂಕಿನ ಅಭ್ಯರ್ಥಿಗಳು ಈ ಮೊಬೈಲ್‌ಗಳಿಗೆ ಸಂಪರ್ಕಿಸಿ ಮಾಹಿತಿ ಪಡೆಯಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪಿಎಚ್‌ಡಿ ಸಂಶೋಧನಾರ್ಥಿಗಳಿಗೆ ಜೆಆರ್‌ಎಫ್ ಮಾದರಿ ಫೆಲೋಶಿಪ್ ನೀಡಲು ಅರ್ಜಿ ಅಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

2025-26 ನೇ ಸಾಲಿನಲ್ಲಿ ಪಿಎಚ್.ಡಿ ಸಂಶೋಧನೆ ಮಾಡುತ್ತಿರುವ ಅರ್ಹ ಅಲ್ಪಸಂಖ್ಯಾತರ ಸಮುದಾಯದ ಸಂಶೋಧನಾರ್ಥಿಗಳಿಗೆ (ಜೆಆರ್‌ಎಫ್) ಮಾದರಿ ಫೆಲೋಶಿಪ್ ನೀಡಲು ಆನ್ ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಗುಡ್ಡಪ್ಪ ಜಿಗಳಿಕೊಪ್ಪ ರವರು ತಿಳಿಸಿದ್ದಾರೆ.

ಅರ್ಹರು ಅರ್ಜಿ ಸಲ್ಲಿಸಲು ಸೆಪ್ಟೆಂಬರ್.30 ರಂದು ಕೊನೆಯ ದಿನಾಂಕವಾಗಿದೆ. ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ) ಅಭ್ಯರ್ಥಿಗಳು ಆಗಿರಬೇಕು. ಸರ್ಕಾರಿ/ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಲು ಅರ್ಹರಾಗಿರುವುದಿಲ್ಲ. ಪೋಷಕರ ವಾರ್ಷಿಕ ಆದಾಯ ರೂ.8 ಲಕ್ಷ ಮೀರಿರಬಾರದು. ವಿದ್ಯಾರ್ಥಿಗಳು ಸರ್ಕಾರದಿಂದ ಶಾಸನಬದ್ಧ ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳಲ್ಲಿ ಪಿಎಚ್‌ಡಿ ಪ್ರವೇಶ ಪಡೆದಿರಬೇಕು. ಗರಿಷ್ಟ ವಯೋಮಿತಿ 35 ವರ್ಷ ಮೀರಬಾರದು. ಕೋರ್ಸ್ ಪೂರ್ಣಾವಧಿಯಾಗಿರಬೇಕು.

ಅರ್ಜಿದಾರರು https://sevasindhu.karnataka.gov.in ಈ ಲಿಂಕ್ ಮೂಲಕ ಅನ್ ಲೈನ್ ನಲ್ಲಿ ಪಿಎಚ್‌ಡಿ ಫೆಲೋಶಿಪ್‌ಗಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ http://dom.karnataka.gov.in ಅನ್ನು ವೀಕ್ಷಿಸಿ ಮಾಹಿತಿಗಾಗಿ ಜಿಲ್ಲಾ ಕಚೇರಿ ಮತ್ತು ಜಿಲ್ಲಾ ಹಾಗೂ ತಾಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಿಗೆಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಸುತ್ತ ಮುತ್ತ ಕುಂದು-ಕೊರತೆ

ನಿಮ್ಮ ಸುತ್ತಮುತ್ತ ಮೂಲಭೂತ ಸೌಲಭ್ಯಗಳ ನಿರ್ವಹಣೆ ಕೊರತೆ, ಮಳೆ ಹಾನಿ ನೀವು ಕಣ್ಣಾರೆ ಕಂಡಿದ್ದೀರಾ? ಹಾಗಾದರೆ ಕೂಡಲೇ ಫೋಟೊ ಕ್ಲಿಕ್ಕಿಸಿ, ವೀಡಿಯೋ ಮಾಡಿ, ನಿಮ್ಮ ಅಭಿಪ್ರಾಯದೊಂದಿಗೆ ಹಂಪಿ ಟೈಮ್ಸ್ ಪತ್ರಿಕೆ ವಾಟ್ಸಪ್ ನಂಬರ್ ಗೆ ಕಳುಹಿಸಿ. **M:9448633038 hampitimes@gmail.com**


### ಪುರಸಭಾ ಕಾರ್ಯಾಲಯ, ವಿಜಯನಗರಜಿಲ್ಲೆ.

ದೂರವಾಣಿ ಸಂ:08398-280258, ಇ-ಮೇಲ್: ka.harapanahalli.tmc@gmail.com

**Office of the Town Municipal Council, Harapanahalli , Dist, Vijayanagara,**

Phone-08398-280258, ವೆಬ್ ಸೈಟ್: harapanahallitown.mrc.gov.in

ಸಖ್ಯೆ:ಪು.ಹಹಹಳ್ಳಿ/RGHCL/PMAY(U)2.0/2025-26 ದಿನಾಂಕ: 24.06.2025

**ಸಾರ್ವಜನಿಕ ಪ್ರಕಟಣೆ**

ಈ ಮೂಲಕ ಹರಪನಹಳ್ಳಿ ಪುರಸಭೆ ವ್ಯಾಪ್ತಿಯ ಸಾರ್ವಜನಿಕರಿಗೆ ತಿಳಿಯಪಡಿಸುವುದೆನೆಂದರೆ, 2025-26ನೇ ಸಾಲೀನ ರಾಜ್ಯಾದ್ಯಂತ ನಗರ ಪ್ರದೇಶಗಳಲ್ಲಿ ಪ್ರಧಾನ ಮಂತ್ರಿ ಆವಾಸ್ (ನಗರ) 2.0 ಯೋಜನೆಯಡಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು. ಓಂಟಿ ಮಹಿಳೆಯರು, ಅಂಗವಿಕಲರು, ಹಿರಿಯ ನಾಗರಿಕರು, ತೃತಿಯ ಲಿಂಗಿಗಳು, ಎಸ್.ಸಿ/ಎಸ್.ಟಿ/ಹಿಂದುಳಿದ/ಅಲ್ಪಸಂಖ್ಯಾತ ವರ್ಗದವರು, ಸ್ವಚ್ಚತಾ ಕಾರ್ಮಿಕರು, PM-SAVnidhi ಯೋಜನೆಯಡಿ ಗುರುತಿಸಲ್ಪಟ್ಟ ಬೀದಿ ವ್ಯಾಪಾರಿಗಳು, ಮತ್ತು ಪ್ರದಾನ್ ಮಂತ್ರಿ ವಿಶ್ವಕರ್ಮ ಯೋಜನೆಯಡಿ ಗುರುತಿಸಿದ ಕುಶಲಕರ್ಮಿಗಳು, ಅಂಗನವಾಡಿ ಕಾರ್ಯಕರ್ತರು, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಕೈಗಾರಿಕರು, ವಲಸೆ ಬಂದ ಕುಟುಂಬದವರು ತಮ್ಮ ಅರ್ಜಿಗಳನ್ನು URL:https://pmay-urban.gov.inನಲ್ಲಿ ಸ್ವತಃ ಅರ್ಜಿಗಳನ್ನು ಸಲ್ಲಿಸಬಹುದು, ದಿನಾಂಕ:15.07.2025 ರ ಒಳಗಾಗಿ ಕಛೇರಿ ವೇಳೆಯಲ್ಲಿ ಈ ಕಾರ್ಯಲಯಕ್ಕೆ ಅರ್ಜಿಗಳನ್ನು ಸಲ್ಲಿಸಬಹುದು, ಅವಧಿ ಮೀರಿ ಬಂದಂತಹ ಅರ್ಜಿಗಳನ್ನು ಪರಿಗಣಿಸುವುದಿಲ್ಲ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಶಾಖೆಯ ಅಧಿಕಾರಿಗಳನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸುವುದು.

**-: ಅರ್ಜಿದಾರರು ಹೊಂದಿರ ಬೇಕಾದ ದಾಖಲೆಗಳು:-**

- ಆಧಾರ್‌ಕಾರ್ಡ್ (ಮನೆಯ ಯಜಮಾನ/ನಿ ಹಾಗೂ ತಂದೆ/ತಾಯಿ ಮತ್ತು ಪಡಿತರ ಚೀಟಿಯಲ್ಲಿ ಇರುವಂತಹ ಕುಟುಂಬ ಸದಸ್ಯರ ಆಧಾರ್ ಕಾರ್ಡ್‌ಗಳು
- ವಸತಿರಹಿತರಾದಲ್ಲಿ ನಿವೇಶನಕ್ಕೆ ಸಂಬಂಧಿಸಿದ ದಾಖಲೆಗಳು. (ಹಕ್ಕುಪತ್ರ/ಕ್ರಯಪತ್ರ/ದಾನಪತ್ರ/ಉಡುಗೊರೆಪತ್ರ/ಖಾತಾ)
- ಆದಾಯ ಮತ್ತು ಜಾತಿ ಪ್ರಮಾಣ ಪತ್ರ
- ಪಡಿತರ ಚೀಟಿ
- ಬ್ಯಾಂಕ್‌ಖಾತೆಯ ವಿವರ
- ನಿಗದಿತನಮೂನೆ (Annexure-2A/2B/2C) ಯಲ್ಲಿ "Self Undertaking" ಸಲ್ಲಿಸುವುದು.
- ಮೋಬೈಲ್ ಸಂಖ್ಯೆ
- ಪಾನ್‌ಕಾರ್ಡ್(ಲಭ್ಯವಿದ್ದಲ್ಲಿ ಮಾತ್ರ)

| ಸಹಿ/- | ಸಹಿ/- | ಸಹಿ/- | ಸಹಿ/- |
|---|---|---|---|
| ಅಧ್ಯಕ್ಷರು ಪುರಸಭೆ ಹರಪನಹಳ್ಳಿ | ಉಪಾಧ್ಯಕ್ಷರು ಪುರಸಭೆ ಹರಪನಹಳ್ಳಿ | ಸ್ಥಾಯಿಸಮಿತಿ ಅಧ್ಯಕ್ಷರು ಪುರಸಭೆ ಹರಪನಹಳ್ಳಿ | ಮುಖ್ಯಾಧಿಕಾರಿಗಳು ಪುರಸಭೆ ಹರಪನಹಳ್ಳಿ |



ಕರ್ನಾಟಕ ಸರ್ಕಾರ

### ಮೀನುಗಾರಿಕೆ ಇಲಾಖೆ

ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿ, ಬಾಪೂಜಿ ನಗರ, ಕೂಡ್ಲಿಗಿ. ವಿಜಯನಗರ ಜಿಲ್ಲೆ – 583135

E-mail ID: adfhpt201@gmail.com

ಸಂಖ್ಯೆ:ವಾಹೊಗು/01/2025-26 ದಿನಾಂಕ:24/06/2025

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಮೀನುಗಾರಿಕೆ ಸಹಾಯಕ ನಿರ್ದೇಶಕರು, ಕೂಡ್ಲಿಗಿ ತಾಲ್ಲೂಕು ಕಛೇರಿಯ ಉಪಯೋಗಕ್ಕಾಗಿ 2025-26ನೇ ಸಾಲಿನ ಅವಧಿಗೆ ದಿನಾಂಕ:01/07/2025 ರಿಂದ 31/03/2026 ರವರೆಗೆ ಒಂದು ಸುಸಜ್ಜಿತವಾದ ಹಾಗೂ ಉತ್ತಮ ಸ್ಥಿತಿಯಲ್ಲಿರುವ ಮಹೇಂದ್ರ ಬೋಲೆರೋ ಅಥವಾ ಟಾಟಾ ಬೋಲ್ಟ್/ಇಂಡಿಗೋ/ಟಯೋಟೋಇಟಿಯೋಸ್/ಮಾರುತಿ ಶಿಫ್ಟ್ ಡಿಸ್ಸೈರ್ ಕಾರನ್ನು ನುರಿತ ಚಾಲಕನೊಂದಿಗೆ ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ಅಲ್ಪಾವಧಿ ಟೆಂಡರ್ ಕರೆಯಲಾಗಿದೆ.

**ಟೆಂಡರ್ ವಿವರ ಈ ಕೆಳಗಿನಂತಿದೆ**

| | | |
|---|---|---|
| 1 | ವಾಹನ ಬಾಡಿಗೆ ಟೆಂಡರ್‌ನ ಗರಿಷ್ಠ ಮೊತ್ತ ರೂ. (ದಿನಾಂಕ: 01/07/2025 ರಿಂದ 31/03/2026 ರವರೆಗೆ) | ಮಾಸಿಕ ಗರಿಷ್ಟ : 40,000/- (ಎ.ಸಿ. ಸಹಿತ ವಾಹನ) |
| 2 | ಟೆಂಡರ್ ಫಾರಂ ಕೊಡುವ ದಿನಾಂಕ | ದಿನಾಂಕ:24/06/2025 ರಿಂದ ದಿನಾಂಕ:30/06/2025 ವರೆಗೆ ರಜಾ ದಿನಗಳನ್ನು ಹೊರತುಪಡಿಸಿ ಬೆಳಿಗ್ಗೆ 10.30 ರಿಂದ ಸಾಯಂಕಾಲ 4.00 ಗಂಟೆಯವರಿಗೆ. |
| 3 | ಟೆಂಡರ್ ಫಾರಂನ್ನು ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ | 30/06/2025 ಸಂಜೆ 4.00 ಗಂಟೆಯ ವರೆಗೆ |
| 4 | ಟೆಂಡರ್ ತೆರೆಯುವ ದಿನಾಂಕ | ದಿನಾಂಕ:30/06/2025 ರಂದು ಅಪರಾಹ್ನ 5.00 ಗಂಟೆಗೆ (ಮೀನುಗಾರಿಕೆ ಉಪ ನಿರ್ದೇಶಕರು, ವಿಜಯನಗರ ರವರ ಸಮ್ಮುಖದಲ್ಲಿ ತೆರೆಯಲಾಗುವುದು) |
| 5 | ಇ.ಎಂ.ಡಿ (ಮುಂಗಡ ಠೇವಣಿ) | ರೂ. 10,000/- ಮೊತ್ತದ ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ. ಅನ್ನು ಮೀನುಗಾರಿಕೆ ಸಹಾಯಕ ನಿರ್ದೇಶಕರು, ಕೂಡ್ಲಿಗಿ ಇವರ ಹೆಸರಿಗೆ ಪಡೆದು ಸಲ್ಲಿಸತಕ್ಕದ್ದು. |

ಸೂಚನೆ: ಟೆಂಡರ್ ಅಧಿಸೂಚನೆಯ ಮಾಹಿತಿಯ ವಿವರ ಮತ್ತು ಇತರೆ ನಿಯಮಗಳ ಬಗ್ಗೆ ಈ ಕಛೇರಿಗೆ ಸಂಪರ್ಕಿಸಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಸಹಿ/- ಮೀನುಗಾರಿಕೆ ಸಹಾಯಕ ನಿರ್ದೇಶಕರು
ಕೂಡ್ಲಿಗಿ

ಮೈಕ್ರೋ ನ್ಯೂಸ್

## ವಿದೇಶಿ ವಿವಿಗಳಲ್ಲಿ ಪಿಜಿ ವ್ಯಾಸಂಗ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
2025–26 ನೇ ಶೈಕ್ಷಣಿಕ ವರ್ಷಕ್ಕೆ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಗುಡ್ಡಪ್ಪ ಜಿಗಳಿಕೊಪ್ಪ ಅವರು ತಿಳಿಸಿದ್ದಾರೆ.
ಅರ್ಹ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಸೆ.30 ರಂದು ಕೊನೆಯ ದಿನವಾಗಿದೆ. ಅಲ್ಪಸಂಖ್ಯಾತರ ಸಮುದಾಯದ(ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್. ಮತ್ತು ಪಾರ್ಸಿ) ಜನಾಂಗಕ್ಕೆ ಸೇರಿದವರಾಗಿರಬೇಕು. ಕೋರ್ಸ್ ಪೂರ್ಣಾವಧಿಯಾಗಿರಬೇಕು. ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ಆದಾಯ ರೂ.15 ಲಕ್ಷ ಮೀರಿರಬಾರದು. ಅಭ್ಯರ್ಥಿಗಳ ವಯೋಮಿತಿ 38 ವರ್ಷಗಳು ಮೀರಿರಬಾರದು. ಅರ್ಜಿದಾರರು https://sevasindhu.karnataka.gov.in ಈ ಲಿಂಕ್ ಮೂಲಕ ಆನ್‌ಲೈನ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ http://dom.karnataka.gov.in ಅನ್ನು ವೀಕ್ಷಿಸಿ ಮಾಹಿತಿಗಾಗಿ ಜಿಲ್ಲಾ ಕಚೇರಿ ವಿಜಯನಗರ ಮತ್ತು ಜಿಲ್ಲಾ ಹಾಗೂ ತಾಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಿಗೆ ಸಂಪರ್ಕಿಸಬಹುದಾಗಿದೆ. ಹೊಸಪೇಟೆ– 8050435366, ಕೂಡ್ಲಿಗಿ ಮತ್ತು ಕೊಟ್ಟೂರು 9060330060, 8494927891. ಹೂವಿನ ಹಡಗಲಿ– 73536 96984, ಹಗರಿಬೊಮ್ಮನಹಳ್ಳಿ– 99802 37242. ಆಯಾ ತಾಲೂಕಿನ ಅಭ್ಯರ್ಥಿಗಳು ಸಂಪರ್ಕಿಸಬೇಕೆಂದು ತಿಳಿಸಿದ್ದಾರೆ.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
ಹಂಪಿ ಟೈಮ್ಸ್
ಬಂಬೂ ಬಜಾರ್, ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ
9448633038, Email:hampitimes@gmail.com

COLD PRESSED OILS
HEALTH Benefits


- Heart Healthy
- Diabetes Friendly
- Healthy Skin & More
- Hair Fall Control

Nandi Enterprises
C/o HAMPI TIMES
Valmiki Circle, HOSAPETE
9482599089

EVENT
Media
Coverage
Call us
94486 33038

# ಕುಡಿಯುವ ನೀರು ಕಲುಷಿತಗೊಳ್ಳದಂತೆ ನಿಗಾವಹಿಸಿ

## ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಸೂಚನೆ | ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ

**ಹಂಪಿ ಟೈಮ್ಸ್ ಬಳ್ಳಾರಿ**
ನಗರ ಮತ್ತು ಗ್ರಾಮಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಮೂಲಗಳು ಕಲುಷಿತಗೊಳ್ಳದಂತೆ ಮಹಾನಗರ ಪಾಲಿಕೆ ಅಧಿಕಾರಿಗಳು, ಆಯಾ ತಾಲ್ಲೂಕು ತಹಶೀಲ್ದಾರರು ನಿಗಾವಹಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಸೂಚಿಸಿದರು.
ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಕೆಸ್ವಾನ್ ವಿಡಿಯೋ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಮಿತಿ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು. ಮುಂಗಾರು ಮಳೆಗಾಲ ಆರಂಭವಾಗಿರುವುದರಿಂದ ಕೊಳಚೆ ನೀರು ಕುಡಿಯುವ ನೀರಿನೊಂದಿಗೆ ಬೆರೆಯದಂತೆ ಅಧಿಕಾರಿಗಳು ಮುನ್ನೆಚ್ಚರಿಕೆ ನಿಗಾ ವಹಿಸಬೇಕು. ಆಯಾ ತಾಲ್ಲೂಕು ಆರೋಗ್ಯಾಧಿಕಾರಿಗಳ ಜೊತೆ ನಿರಂತರ ಸಂಪರ್ಕದಲ್ಲಿರಬೇಕು. ಪ್ರತಿ 15 ದಿನಗಳಿಗೊಮ್ಮೆ ಸಭೆ ನಡೆಸಿ, ಸಮಸ್ಯೆಗಳಿದ್ದಲ್ಲಿ ಪರಿಹರಿಸಿಕೊಳ್ಳಬೇಕು ಎಂದು ತಿಳಿಸಿದರು.
ಈ ಭಾಗದ ತುಂಗಭದ್ರಾ ಜಲಾಶಯವು ಪ್ರಸ್ತುತದಲ್ಲಿ 48.270 ಟಿಎಂಸಿ ನೀರಿನ ಸಂಗ್ರಹಣಾ ಮಟ್ಟ ತಲುಪಿದೆ. ಮಲೆನಾಡು ವ್ಯಾಪ್ತಿಯಲ್ಲಿ ವ್ಯಾಪಕ ಮಳೆಯಾಗುತ್ತಿರುವುದರಿಂದ ಮುಂಬರುವ ದಿನಗಳಲ್ಲಿ ಜಲಾಶಯದಿಂದ ನದಿಗೆ ನೀರು ಹರಿಸುವ ಸಾಧ್ಯತೆ ಇರಲಿದೆ. ಹಾಗಾಗಿ ಕಂಪ್ಲಿ, ಸಿರುಗುಪ್ಪ ಭಾಗದ ನದಿಪಾತ್ರದ ಗ್ರಾಮಗಳಿಗೆ ಎಚ್ಚರಿಕೆ ನೀಡಬೇಕು ಎಂದು ಆಯಾ ತಾಲ್ಲೂಕು ತಹಶೀಲ್ದಾರರಿಗೆ ನಿರ್ದೇಶನ ನೀಡಿದರು.
ಕಾಳಜಿ ಕೇಂದ್ರಗಳನ್ನು ಸಿದ್ಧತೆಯಲ್ಲಿಟ್ಟುಕೊಳ್ಳಲು ಅಗತ್ಯ ವ್ಯವಸ್ಥೆ ಮಾಡಿಕೊಳ್ಳಬೇಕು. ಒಟ್ಟಾರೆಯಾಗಿ ಅಧಿಕಾರಿಗಳು ಯಾವುದೇ ತುರ್ತು ಸಂದರ್ಭ ನಿರ್ವಹಣೆಗೆ ಸಿದ್ಧರಿರಬೇಕು ಎಂದು ತಿಳಿಸಿದರು.
ಮಳೆಯಿಂದಾಗಿ ಸಾರ್ವಜನಿಕ ಆಸ್ತಿ ಹಾನಿ, ಮಾನವ, ಜಾನುವಾರು ಜೀವಹಾನಿ, ಬೆಳೆ ಹಾನಿ, ಮನೆಗಳ ಹಾನಿ ಬಗ್ಗೆ ಗ್ರಾಮಲೆಕ್ಕಿಗರು, ರಾಜಸ್ವ ನಿರೀಕ್ಷಕರಿಂದ ವರದಿ ಪಡೆದು, ತಾಲ್ಲೂಕುವಾರು ಕ್ರೋಢೀಕರಿಸಿ ವರದಿ ಸಲ್ಲಿಸಬೇಕು ಎಂದು ತಹಶೀಲ್ದಾರರಿಗೆ ಸೂಚಿಸಿದರು.



ಸಾಂಕ್ರಾಮಿಕ ರೋಗಗಳು ಹರಡಲು ಅವಕಾಶ ನೀಡದಂತೆ ಚರಂಡಿಗಳ ಸ್ವಚ್ಛತೆಗೆ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ವಹಿಸಬೇಕು. ಜಿಲ್ಲೆಯಲ್ಲಿ ಈಗಾಗಲೇ ಮುಂಗಾರು ಹಂಗಾಮಿನಲ್ಲಿ ಶೇ.17 ರಷ್ಟು ಬಿತ್ತನೆಯಾಗಿದ್ದು, ಅಗತ್ಯ ಬಿತ್ತನೆ ಬೀಜ, ರಸಗೊಬ್ಬರ ದಾಸ್ತಾನು ಇಟ್ಟುಕೊಳ್ಳಬೇಕು ಎಂದು ಕೃಷಿ ಅಧಿಕಾರಿಗಳಿಗೆ ತಿಳಿಸಿದರು.
ನಗರ ಮತ್ತು ಗ್ರಾಮಗಳಲ್ಲಿ ಮಳೆ ನೀರು ಸರಾಗವಾಗಿ ಹರಿಯಲು ರಾಜ ಕಾಲುವೆ, ಚರಂಡಿ, ಸೇತುವೆ ಹೂಳು ತೆಗೆದು ಸ್ವಚ್ಛಗೊಳಿಸುವುದರ ಸಂಬಂಧ ಕ್ರಮವಹಿಸಬೇಕು ಎಂದು ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.
ನಗರ ವ್ಯಾಪ್ತಿಯಲ್ಲಿ ಮಳೆಯಿಂದ ಹೆಚ್ಚು ನೀರು ನಿಲ್ಲುವ ಸ್ಥಳಗಳಲ್ಲಿ ನಿರೇತ್ತಲು 3 ಡಿಸೇಲ್ ಮತ್ತು 3 ಎಲೆಕ್ಟ್ರಿಕಲ್ ಮಷಿನ್‌ಗಳನ್ನು ಸಿದ್ಧವಾಗಿಟ್ಟುಕೊಳ್ಳಲಾಗಿದೆ. ನಗರ ವ್ಯಾಪ್ತಿಯ 28 ಕಿ.ಮೀ ವ್ಯಾಪ್ತಿಯ ರಾಜ ಕಾಲುವೆಯಲ್ಲಿ ಈಗಾಗಲೇ 24 ಕಿ.ಮೀ ಸ್ವಚ್ಛಗೊಳಿಸಲಾಗಿದೆ ಎಂದು ಮಹಾನಗರ ಪಾಲಿಕೆಯ ಅಧಿಕಾರಿಗಳು ಸಭೆಗೆ ತಿಳಿಸಿದರು.
ಮಳೆಗಾಲದಲ್ಲಿ ವಿದ್ಯುತ್ ಸರಬರಾಜು ಮೇಲೆ ಉಂಟಾಗಬಹುದಾದ ವ್ಯತ್ಯಯ ಅಂಶಗಳನ್ನು ಗಮನದಲ್ಲಿರಿಸಿ ವಿದ್ಯುತ್ ಮೂಲ ಸೌಕರ್ಯಗಳನ್ನು ಬಲಪಡಿಸುವುದು, ಯಾವುದೇ ವಿದ್ಯುತ್ ಕಡಿತ, ತುರ್ತುಸ್ಥಿತಿಗೆ ಹಾಜರಾಗಲು ಮತ್ತು ವಿದ್ಯುತ್ ಸರಬರಾಜನ್ನು ತ್ವರಿತವಾಗಿ ಪುನಃ ಸ್ಥಾಪಿಸಲು ರಚಿಸುವುದು ಮತ್ತು ವಿದ್ಯುತ್ ತಂತಿ ಹಾದು ಹೋಗುವ ಮಾರ್ಗಗಳಲ್ಲಿ ಮಳೆ ಗಾಳಿಗೆ ಬೀಳುವಂತಹ ಮರಗಳನ್ನು ಕೊಂಬೆಗಳನ್ನು ಕತ್ತರಿಸಬೇಕು. ಜೆಸ್ಕಾಂ ಸಹಾಯವಾಣಿ ಸಂಖ್ಯೆ 1912 ಬಗ್ಗೆ ಸಾರ್ವಜನಿಕರಿಗೆ ಹೆಚ್ಚಿನ ಮಾಹಿತಿ ನೀಡಬೇಕು ಎಂದು ಜೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರು.
ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ಲಭ್ಯವಿರುವ ಎಲ್ಲಾ ರಕ್ಷಣಾ ಸಲಕರಣೆಗಳನ್ನು ಸುಸ್ಥಿತಿಯಲ್ಲಿರುವಂತೆ ಕ್ರಮ ವಹಿಸಬೇಕೆಂದು ಅಗ್ನಿಶಾಮಕ ಮತ್ತು ಗೃಹ ರಕ್ಷಕದಳ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು.
ತುರ್ತು ಸಂದರ್ಭಗಳಲ್ಲಿ ಇತರೆ ಎಲ್ಲಾ ಇಲಾಖೆಗಳನ್ನು ಒಳಗೊಂಡಂತೆ ರಕ್ಷಣಾ ಕಾರ್ಯಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳು ಸನ್ನದ್ಧರಾಗಬೇಕೆಂದು ಜಿಲ್ಲಾಧಿಕಾರಿಗಳು ತಿಳಿಸಿದರು.
*ಮರುಪರಿಶೀಲನೆ ನಡೆಸಿ:*
ಜಿಲ್ಲೆಯಲ್ಲಿ ಕನಿಷ್ಠ ಬೆಂಬಲ ಯೋಜನೆಯಡಿ ಖರೀದಿಸಲಾಗುತ್ತಿರುವ ಜೋಳ ಪ್ರಕ್ರಿಯೆಯಲ್ಲಿ ಅವ್ಯವಹಾರ ನಡೆಯುತ್ತಿರುವುದಾಗಿ ದೂರುಗಳು ಕೇಳಿ ಬರುತ್ತಿದೆ. ರೈತರ ಎಫ್‌ಐಡಿ ಹೆಸರಿನಲ್ಲಿ ವ್ಯಾಪಾರಿಗಳು ಜೋಳ ಮಾರಾಟ ಮಾಡುತ್ತಿದ್ದಾರೆ. ಮಾರುಕಟ್ಟೆ ಬೆಲೆಗಿಂತ ಕನಿಷ್ಠ ಬೆಂಬಲ ಯೋಜನೆಯಡಿಯ ಬೆಲೆಯು ಅಧಿಕವಾಗಿರುವುದರಿಂದ ಹೆಚ್ಚಾಗಿ ಮಾರಾಟವಾಗುತ್ತಿರುವುದಾಗಿ ತಿಳಿದುಬಂದಿದೆ. ಹೀಗಾಗಿ ಎಲ್ಲಾ ತಹಶೀಲ್ದಾರರು, ಜೋಳ ಮಾರಾಟಕ್ಕೆ ನೋಂದಣಿ ಮಾಡಿಕೊಂಡ ಎಲ್ಲಾ ರೈತರ ಎಫ್‌ಐಡಿಗಳನ್ನು ಮರು ಪರಿಶೀಲಿಸಬೇಕು ಎಂದರು.
ಬಳ್ಳಾರಿ, ಕುರುಗೋಡು ಮತ್ತು ಕಂಪ್ಲಿ ಭಾಗದಲ್ಲಿ ಹೆಚ್ಚಾಗಿ ಈ ಸಮಸ್ಯೆ ಕಂಡುಬರುತ್ತಿದ್ದು, ವ್ಯಾಪಾರಿಗಳ ಹಾವಳಿ ಹೆಚ್ಚಾಗಿದ್ದು, ಈ ಬಾರಿ ಪಿಆರ್ ಗಳ ನೇಮಕ ಮಾಡುವಲ್ಲಿ ಎಚ್ಚರ ವಹಿಸಬೇಕು ಎಂದು ನಿರ್ದೇಶನ ನೀಡಿದರು.ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್, ಕೃಷಿ ಜಂಟಿ ನಿರ್ದೇಶಕ ಸೋಮಸುಂದರ್ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ತಹಶೀಲ್ದಾರರು ಉಪಸ್ಥಿತರಿದ್ದರು.

# ನಿರ್ಗತಿಕ ಮಕ್ಕಳ ಹಿತದೃಷ್ಟಿಗಾಗಿ ಜಿಲ್ಲಾ ಸಾಥಿ ಸಮಿತಿ ರಚನೆ

**ಹಂಪಿ ಟೈಮ್ಸ್ ಹೊಸಪೇಟೆ**
ಜಿಲ್ಲಾ ಮಟ್ಟದಲ್ಲಿ ನಿರ್ಗತಿಕ ಮಕ್ಕಳನ್ನು ಗುರುತಿಸಿ ಅಧಾರ್ ದಾಖಲೆಯಲ್ಲಿ ಮಕ್ಕಳ ಹೆಸರನ್ನು ಸೇರಿಸಿ ಅವರಿಗೆ ಶಿಕ್ಷಣ, ವೈದ್ಯಕೀಯ ಸೇವೆ ಮತ್ತು ಸರ್ಕಾರದಿಂದ ಬರುವ ಯೋಜನೆಗಳನ್ನು ದೊರಕಿಸಿಕೊಡುವ ನಿಟ್ಟಿನಲ್ಲಿ ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಲ್ಲಿ 'ಜಿಲ್ಲಾ ಸಾಥಿ ಸಮಿತಿ'ಯನ್ನು ರಚಿಸಲಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯಾದ ಎನ್.ರಾಜೇಶ್ ಹೊಸಮನೆ ತಿಳಿಸಿದ್ದಾರೆ.
ಸರ್ಕಾರಿ ಸಂಸ್ಥೆಗಳಲ್ಲಿ ಆಶ್ರಯ ಪಡೆಯುತ್ತಿರುವ 18 ವರ್ಷದೊಳಗಿನ ನಿರ್ಗತಿಕ ಮಕ್ಕಳು ಹಾಗೂ ಬೀದಿ, ಕೊಳಗೇರಿ, ರೈಲ್ವೆ ನಿಲ್ದಾಣ, ಆರೈಕೆ ಕೇಂದ್ರ ವಾಸಿಸುತ್ತಿರುವ ಮಕ್ಕಳು. ಅನಾಥರು, ಏಕಪೋಷಕ ಮಕ್ಕಳು, ಕಳ್ಳ ಸಾಗಾಣಿಕೆಯಲ್ಲಿ ಸಿಲುಕಿದ ಮತ್ತು ಬಾಲ ಕಾರ್ಮಿಕರು, ಭಿಕ್ಷಾಟನೆಯಲ್ಲಿ ತೊಡಗಿದ ಮಕ್ಕಳು. ಮಾದಕ ವ್ಯಸನಿ ಹಾಗೂ ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಕ್ಕಳು, ಜೀತ ಪದ್ಧತಿಯಿಂದ ರಕ್ಷಿಸಲ್ಪಟ್ಟಿರುವ ಮಕ್ಕಳನ್ನು ಗುರುತಿಸಿ ಅವರಿಗೆ ಆಧಾರ್ ದಾಖಲಾತಿಯನ್ನು ಮಾಡಿಸಿ ಅವರಿಗೆ ಕಾನೂನಿನ ನೆರವು, ಆರೋಗ್ಯ ರಕ್ಷಣೆ, ಶಿಕ್ಷಣ ಹಾಗೂ ಸರ್ಕಾರದ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಹಾಗೂ ನಿರ್ಗತಿಕ ಮಕ್ಕಳ ಗುರುತಿಸಿ ಅವರ ಪೋಷಕರು, ಕುಟುಂಬಕ್ಕೆ ಸೇರಿಸುವುದು ಜಿಲ್ಲಾ ಸಾಥಿ ಸಮಿತಿಯ ಉದ್ದೇಶವಾಗಿದೆ. ಈ ಸಮಿತಿಯಲ್ಲಿ ಎರಡೂ ಜಿಲ್ಲೆಗಳ ತಾಲೂಕುಗಳ ತಹಶೀಲ್ದಾರರು, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಡಿಡಿಪಿಐ, ಜಿಲ್ಲಾ ಆರೋಗ್ಯ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿಗಳು, ಅನಾಥಾಶ್ರಮ ಮತ್ತು ಮಕ್ಕಳ ಕಾಳಜಿ ಕೇಂದ್ರಗಳ ಅಧಿಕಾರಿಗಳು, ಪ್ಯಾನಲ್ ವಕೀಲರು ಮತ್ತು ಅರೆಕಾಲಿಕ ಕಾನೂನು ಸ್ವಯಂ ಸೇವಕರು ಸದಸ್ಯರುಗಳಾಗಿರುತ್ತಾರೆ. ಸಮಿತಿಯ ಸದಸ್ಯರು ನಿರ್ಗತಿಕ ಮಕ್ಕಳನ್ನು ಗುರುತಿಸಿ ಅವರಿಗೆ ಆಧಾರ್ ದಾಖಲೆಗಳನ್ನು ಮಾಡಿಸಿ, ಅವರಿಗೆ ಆರೋಗ್ಯ, ಶಿಕ್ಷಣ,ಪುರ್ನವಸತಿಗಾಗಿಕ್ರಮಕೈಗೊಳ್ಳಲಾಗಿರುತ್ತದೆ. ಸಮಿತಿಯೊಂದಿಗೆ ಕಾಲೇಜು ವಿದ್ಯಾರ್ಥಿಗಳು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ಸರ್ಕಾರೇತರ ಸಂಸ್ಥೆಗಳು ಸಹ ಕಾರ್ಯನಿರ್ವಹಿಸುತ್ತವೆ ಎಂದು ತಿಳಿಸಿದರು.
ಸಾರ್ವಜನಿಕರು ಯಾವುದೇ ರೀತಿಯ ನಿರ್ಗತಿಕ ಮಕ್ಕಳನ್ನು ನೋಡಿದಲ್ಲಿ ಕೂಡಲೇ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ದೂ.08392 278077, 9141193929, ಮಕ್ಕಳ ಸಹಾಯವಾಣಿ ಸಂಖ್ಯೆ 1098 ಹಾಗೂ ಉಚಿತ ಕಾನೂನು ಸೇವೆ ಸಂಖ್ಯೆ 15100 ಕರೆ ಮಾಡಿ ತಿಳಿಸಬೇಕೆಂದು ತಿಳಿಸಿದ್ದಾರೆ.

# ರಕ್ತದಾನ ಅನೇಕರ ಜೀವಕ್ಕೆ ಸಂಜೀವಿನಿ

**ಮೊದಲ ಪುಟದಿಂದ**
ಗುರಿ ಹೊಂದಲಾಗಿದೆ.
ರಕ್ತಹೀನತೆಯಿಂದ ಬಳಲುವ ಗರ್ಭಿಣಿ ಸ್ತ್ರೀಯರಿಗೆ, ಶಸ್ತ್ರಚಿಕಿತ್ಸಾ ಹೆರಿಗೆ ವೇಳೆ ಹಾಗೂ ಕ್ಯಾನ್ಸರ್ ರೋಗಿಗಳಿಗೆ ಜೀವ ಉಳಿಸಲು ರಕ್ತ ಸಹಕಾರಿ ಆಗುತ್ತದೆ. ಮುಂಬರುವ ದಿನಗಳಲ್ಲಿ ಜಿಲ್ಲೆಯಲ್ಲಿ ರಕ್ತದ ಕೊರತೆಯಾಗದಂತೆ ಕ್ರಮ ವಹಿಸಲಾಗುವುದು. ಜೀವ ಉಳಿಸುವ ಪುಣ್ಯದ ಕಾರ್ಯಕ್ಕೆ ಪ್ರತಿಯೊಬ್ಬರೂ ಕೈ ಜೋಡಿಸಬೇಕು ಎಂದರು.
ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭರಾಣಿ ವಿ.ಜೆ ಅವರು ರಕ್ತದಾನ ಮಾಡುವ ಮೂಲಕ ಇತರರಿಗೆ ಮಾದರಿಯಾದರು. ಬಳಿಕ ಪ್ರಮಾಣ ಪತ್ರ ನೀಡಲಾಯಿತು.
ಈ ವೇಳೆ ಜಿಲ್ಲೆಯಲ್ಲಿ ಅತಿ ಹೆಚ್ಚು ರಕ್ತದಾನ ಮಾಡಿದ ಆಶಾ ಕಾರ್ಯಕರ್ತೆ ಪರಿಮಳ, ವಂಶಿ ಕಲ್ಯಾಣಿ ರೆಡ್ಡಿ, ಮಂಜುನಾಥ, ಲೋಕೇಶ್ ಅವರಿಗೆ ಸನ್ಮಾನ ಮಾಡಲಾಯಿತು. ರಕ್ತದಾನ ಮಾಡಿದ ವ್ಯಕ್ತಿಗಳಿಗೆ ಪ್ರಮಾಣ ಪತ್ರ ಜೊತೆಗೆ ಹಣ್ಣು, ಜ್ಯೂಸ್ ನೀಡಲಾಯಿತು.
ಈ ಸಂದರ್ಭದಲ್ಲಿ ಬಿಎಂಸಿಆರ್‌ಸಿ ನಿರ್ದೇಶಕ ಟಿ.ಗಂಗಾಧರ ಗೌಡ, ಜಿಲ್ಲಾ ಶಸ್ತ್ರಚಿಕಿತ್ಸಕ ಎನ್.ಬಸರೆಡ್ಡಿ, ಮಿನೇರ ಸ್ಟೀಲ್ಸ್ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕ ಟಿ.ಹನುಮಂತ ರೆಡ್ಡಿ, ಉಪಾಧ್ಯಕ್ಷ ಗಿರೀಶ್ ಕುಮಾರ್, ಇಂಡಸ್ಟ್ರೀಸ್‌ನ ಹಿರಿಯ ಸಹಾಯಕ ನಿರ್ದೇಶಕ ವರುಣ್ ಕುಮಾರ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಆಸೀಫ್, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಹಾಗೂ ಏಡ್ಸ್ ನಿಯಂತ್ರಣಾಧಿಕಾರಿ ಡಾ.ಇಂದ್ರಾಣಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ, ತಾರಾನಾಥ ವೈದ್ಯಕೀಯ ವಿದ್ಯಾಲಯದ ಪ್ರಶಿಕ್ಷಣಾರ್ಥಿಗಳು, ಸಾರ್ವಜನಿಕರು, ಇನ್ನಿತರರು ಉಪಸ್ಥಿತರಿದ್ದರು.

# ಪ್ರಧಾನಮಂತ್ರಿ ಅವಾಸ್ ಯೋಜನೆ: ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
ತಾಲೂಕಿನ ಕಮಲಾಪುರ ಪುರಸಭೆ ವ್ಯಾಪ್ತಿಯ ಸಾರ್ವಜನಿಕರಿಗೆ 2025–26 ನೇ ಸಾಲಿನ ರಾಜ್ಯಾದ್ಯಂತ ನಗರ ಪ್ರದೇಶಗಳಲ್ಲಿ ಪ್ರಧಾನ ಮಂತ್ರಿ ಅವಾಸ್ (ನಗರ) 2.0 ಯೋಜನೆಯಡಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಮುಖ್ಯಾಧಿಕಾರಿಗಳಾದ ಡಿ.ಬಿ.ಈರಣ್ಣ ತಿಳಿಸಿದ್ದಾರೆ.
ಸ್ಥಳೀಯ ನಿವಾಸಿಗಳಾದ ಒಂಟಿ ಮಹಿಳೆಯರು, ಅಂಗವಿಕಲರು, ಹಿರಿಯ ನಾಗರಿಕರು, ತೃತೀಯ ಲಿಂಗಿಗಳು, ಎಸ್ಸಿ, ಎಸ್ಟಿ ಹಾಗೂ ಹಿಂದುಳಿದವರು, ಅಲ್ಪಸಂಖ್ಯಾತ ವರ್ಗದವರು, ಸ್ವಚ್ಛತಾ ಕಾರ್ಮಿಕರು, ಪಿಎಂ ಸ್ವನಿಧಿ ಯೋಜನೆಯಡಿ ಗುರುತಿಸಲ್ಪಟ್ಟ ಬೀದಿ ಬದಿ ವ್ಯಾಪಾರಿಗಳು ಮತ್ತು ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆಯಡಿ ಗುರುತಿಸಿದ ಕುಶಲಕರ್ಮಿಗಳು, ಅಂಗನವಾಡಿ ಕಾರ್ಯಕರ್ತೆಯರು, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಕೈಗಾರಿಕರು, ವಲಸೆ ಬಂದ ಕುಟುಂಬದವರು ತಮ್ಮ ಅರ್ಜಿಗಳನ್ನು https://pmay-urban.gov.in ವೆಬ್‌ಸೈಟ್ ನಲ್ಲಿ ಸ್ವತಃ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಇದೇ ಜುಲೈ.15 ರೊಳಗಾಗಿ ಸಲ್ಲಿಸಿದ ದಾಖಲಾತಿಗಳನ್ನು ಪುರಸಭೆ ಕಾರ್ಯಾಲಯಕ್ಕೆ ಕಡ್ಡಾಯವಾಗಿ ನೀಡತಕ್ಕದ್ದು, ಅವಧಿ ಮೀರಿ ಬಂದಂತಹ ಅರ್ಜಿಗಳನ್ನು ಪರಿಗಣಿಸುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕಚೇರಿಯ ಆಶ್ರಯ ಶಾಖೆಯ ಅಧಿಕಾರಿಗಳನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬೇಕು ಎಂದು ತಿಳಿಸಿದ್ದಾರೆ.

# ಅತಿಥಿ ಉಪನ್ಯಾಸಕರ ಹುದ್ದೆಗಳಿಗಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**
2025–26ನೇ ಶೈಕ್ಷಣಿಕ ಸಾಲಿನ ಸ್ನಾತಕ ಕೋರ್ಸುಗಳಿಗೆ ಕೊಪ್ಪಳ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ಯಲಬುರ್ಗಾದ ವಿಭಾಗಗಳಲ್ಲಿ ಅಗತ್ಯತೆಗನುಸಾರ ಬೋಧನಾಕಾರ್ಯದ ನಿರ್ವಹಣೆಗಾಗಿ ಯುಜಿಸಿ (UGC) ನಿಯಮಾನುಸಾರ ಪೂರ್ಣಕಾಲಿಕ/ಅರೆಕಾಲಿಕ ಅತಿಥಿ ಉಪನ್ಯಾಸಕರ ಹುದ್ದೆಗಳಿಗಾಗಿ, ವಿಷಯಗಳ ಬೋಧನಾ ಕಾರ್ಯಕ್ಕನುಗುಣವಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ಪಡೆಯಲು ಮತ್ತು ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ಜಾಲತಾಣ www.koppaluniversity.ac.in ನ್ನು ನೋಡಬಹುದಾಗಿದೆ ಎಂದು ಕೊಪ್ಪಳ ವಿಶ್ವವಿದ್ಯಾಲಯದ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
2025–26 ನೇ ಸಾಲಿನಲ್ಲಿ ಐಐಟಿ, ಐಐಐಟಿ ಸೇರಿದಂತೆ ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪಡೆದಿರುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಂದ ಪ್ರೋತ್ಸಾಹ ಧನಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಗುಡ್ಡಪ್ಪ ಜಿಗಳಿಕೊಪ್ಪ ತಿಳಿಸಿದ್ದಾರೆ.
ಐಐಟಿ, ಐಐಐಟಿ, ಐಐಎಂ, ಐಐಎಸ್‌ಇಆರ್, ಎಐಐಎಂಎಸ್, ಎನ್‌ಎಲ್‌ಯು, ಐಎನ್‌ಐ ಮತ್ತು ಐಯುಎಸ್‌ಎಲ್‌ಎ ಮುಂತಾದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಪ್ರವೇಶ ಪಡೆದಿರುವ ಅಲ್ಪಸಂಖ್ಯಾತ ಸಮುದಾಯದ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್. ಪಾರ್ಸಿ) ವಿದ್ಯಾರ್ಥಿಗಳಿಗೆ ಕೋರ್ಸ್‌ನ ಪೂರ್ಣ ಅವಧಿಯಲ್ಲಿ ಒಂದು ಬಾರಿಗೆ ಪೋತ್ಸಾಹಧನ ನೀಡಲು https://sevasindhu.karnataka.gov.in/sevasindhu/departmentservices, ವೆಬ್ ಸೈಟ್ ಮೂಲಕ ಸೆ.30 ರೊಳಗಾಗಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.ಹೆಚ್ಚಿನ ಮಾಹಿತಿಗಾಗಿ http://dom.karnataka.gov.in ಅನ್ನು ವೀಕ್ಷಿಸಿ ಅಥವಾ ಹತ್ತಿರದ ಜಿಲ್ಲಾ ಹಾಗೂ ತಾಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಿಗೆ ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದ್ದಾರೆ.


- Admissions
- Requirements
- Firm Branding
- Public Notice
- Change of Name

"Thousands of eyes, one newspaper. 'Hampi Times' delivers your message directly to Hampi Times engaged readers."
HAMPI TIMES Kannada Daily
Print & Digital News Paper
BOOK NOW!
Scan to Read

- Obituary
- Remembrance
- Birthday wish ads
- Events Display &
- Classified ads

# HAMPI TIMES, Bamboo Bazaar, Nr Valmiki Circle, Hospete-583201, Vijayanagara Dist. 9482599089 / 9448633038